# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–34, ಶ್ರೀ ಶುಭಕೃತ್‌ನಾಮ ಸಂವತ್ಸರ, ಮಾಘ ಮಾಸ ಜನವರಿ–2023, ಸಂಚಿಕೆ–10, ಪುಟಗಳು–28, ಬೆಲೆ ರೂ.–15/–







ದತ್ತಸನ್ನಿಧಿಯಲ್ಲಿ ವಿಪ್ರ ಅರ್ಚಕರ ಮತ್ತು ಪುರೋಹಿತರ ರಾಜ್ಯ ಸಮಾವೇಶ





ಧಾರವಾಡದಲ್ಲಿ ಋಗ್ವೇದ ಸಂಹಿತಾಯಾಗ



ಮಹಾಸಭಾ ದಿನದರ್ಶಿ ಬಿಡುಗಡೆ



86ನೇ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರು



ಅರಸಿಕೆರೆ ವಿಪ್ರನೌಕರರ ಬಳಗ ದಶಮಾನೋತ್ಸವ



ಹಾಸನ ಬಬ್ಬೂರು ಕಮ್ಮಿ ಸೇವಾಸಂಘದ ದಶಮಾನೋತ್ಸವ





ಗದಗಿನಲ್ಲಿ ಅಧ್ಯಕ್ಷರಿಗೆ ಸನ್ಮಾನ ಹಾಗೂ ದಿನದರ್ಶಿ ಬಿಡುಗಡೆ



ರಾಯಚೂರಿನಲ್ಲಿ ಸ್ವಾಮೀ ವಿವೇಕಾನಂದ ಜಯಂತಿ



ವಿದ್ವಾನ್ ಕೆ.ಜಿ. ಸುಬ್ಬರಾಯ ಶರ್ಮ ದಂಪತಿಗಳಿಗೆ
75ನೇ ವರ್ಧಂತಿ ಅಮೃತೋತ್ಸವ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್**

ಖಜಾಂಚಿ
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ। ಬಿ.ಎಸ್. ರಾಘವೇಂದ್ರ ಭಟ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 050. ದೂ. : 26606061.

# ನಲ್ನುಡಿ

**'ದಾನಂ ಪ್ರಿಯವಾಕ್ ಸಹಿತಂ ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಂ।**
**ವಿತ್ತಂ ತ್ಯಾಗಯುಕ್ತಂ ದುರ್ಲಭಮೇತತ್ ಚತುರ್ಭದ್ರಮ್ ॥**

'ಪ್ರೀತಿಯ ಮಾತಿನಿಂದ ಕೂಡಿದ ದಾನ, ಅಹಂಕಾರವಿಲ್ಲದ ಜ್ಞಾನ, ಕ್ಷಮೆಯಿಂದ ಕೂಡಿದ ಶೌರ್ಯ, ತ್ಯಾಗದಿಂದ ಕೂಡಿದ ಸಂಪತ್ತು, ಈ ನಾಲ್ಕು ಒಳ್ಳೆಯವು. ಆದರೆ ಇವು ದುರ್ಲಭ.'

"ನಾರಾಯಣ ಪಂಡಿತನ ಹಿತೋಪದೇಶ" ಗ್ರಂಥದ ಸುಭಾಷಿತವಿದು. ಇದರಲ್ಲಿ ಅಪರೂಪದ ನಾಲ್ಕು ಮೌಲ್ಯಗಳ ಬಗ್ಗೆ ಕವಿ ಪ್ರಸ್ತಾಪಿಸಿ, ಇವುಗಳನ್ನು ಜೀವನದಲ್ಲಿ ಆಚರಣೆಗೆ ತರುವುದು ಒಳ್ಳೆಯದು. ಆದರೆ ಕಾಣುವುದು ಕಷ್ಟ ಎಂದಿದ್ದಾನೆ. 'ಮೊದಲನೆಯದಾಗಿ ದಾನಂ ಪ್ರಿಯವಾಕ್ ಸಹಿತಮ್ – ದಾನ ಮಾಡುವಾಗ ಒಳ್ಳೆಯ ಮನಸ್ಸಿನಿಂದ, ಹೆದರಿಕೆಯಿಂದ ಗರ್ವರಹಿತವಾಗಿ ಯೋಗ್ಯರಿಗೆ, ಯೋಗ್ಯಸಂಸ್ಥೆಗಳಿಗೆ ರಹಸ್ಯವಾಗಿ ದಾನ ಮಾಡಬೇಕು. ತೈತ್ತಿರೀಯೋಪನಿಷತ್‌ನ ಸಾಂದರ್ಭಿಕ ವಾಕ್ಯಗಳು ಈ ವಿಷಯದಲ್ಲಿ ಸಮಯೋಚಿತವಾದವು. (**ಶ್ರಿಯಾ ದೇಯಂ। ಭಿಯಾ ದೇಯಂ। ಸಂವಿಧಾದೇಯಂ।** )

ಎರಡನೆಯದಾಗಿ ಜ್ಞಾನ–ಗರ್ವಕ್ಕೂ ಇರುವ ನಂಟು. ಕೆಲವರಿಗೆ ಸ್ವಲ್ಪ ತಿಳಿದುಕೊಂಡರೂ ಅಹಂಕಾರಿಗಳಾಗುತ್ತಾರೆ. ಅವರ ನಡೆ–ನುಡಿಯಲ್ಲಿ ಅದು ವ್ಯಕ್ತವಾಗುತ್ತದೆ. ಆದರೆ ಜ್ಞಾನಿಗಳಾದವರು ವಿನಯಶಾಲಿಗಳಾಗಿರಬೇಕು. ತುಂಬಿದ ಕೊಡ ತುಳುಕುವುದಿಲ್ಲ ಎಂಬ ಗಾದೆಯಂತೆ ಗರ್ವರಹಿತರಾಗಿರಬೇಕು. ಖಾಲಿ ಮಡಕೆಯಲ್ಲಿ ಕಲ್ಲುಗಳನ್ನು ಹಾಕಿ ಅಲ್ಲಾಡಿಸಿದಾಗ, ಶಬ್ದ ಮಾಡುವುದಿಲ್ಲವೇ? ಆ ರೀತಿ ಕೆಲವರು ಅನವಶ್ಯಕ, ಅರ್ಥರಹಿತ ಮಾತು–ವಾದಗಳಲ್ಲಿ ತೊಡಗಿರುತ್ತಾರೆ. ಅದು ಅನವಶ್ಯಕ, ಮೂರನೆಯದು ಕ್ಷಮಾನ್ವಿತಂ ಶೌರ್ಯಂ, ಧೀರರಾದವರು ಸೂಕ್ತ ಸಮಯದಲ್ಲಿ, ಶೌರ್ಯವನ್ನು ಪ್ರದರ್ಶಿಸಬೇಕು. ಆಯುಧಗಳು ರಕ್ಷಣೆಗಾಗಿ ಇರಬೇಕೇ ಹೊರತು ಆಕ್ರಮಣಕ್ಕಲ್ಲ. ಮೊದಲ ಬಾರಿಗೆ ತಪ್ಪು ಮಾಡಿದವರನ್ನು ಕ್ಷಮಿಸಿ, ಬುದ್ಧಿವಾದ ಹೇಳಿ, ಮತ್ತೆ ಅವರು ಅಂತಹ ದುಷ್ಕಾರ್ಯ ಮಾಡದಂತೆ ಪ್ರೇರೇಪಿಸಬೇಕು. 'ಸಾವಿರ ಕಾಲ ಸಾಮ ಓದಿ ಮನೆ ಅಜ್ಜಿಯ ಸೊಂಟ ಮುರಿದ' ಎಂಬಂತೆ ಶೌರ್ಯ ಪ್ರದರ್ಶಿಸಬಾರದು. ಶೌರ್ಯಕ್ಕೆ ಕ್ಷಮೆ ಸಹನೆಯೇ ಮುಖ್ಯ. ಹಣವನ್ನು ಸಂಪಾದಿಸುವುದು ಸ್ವಂತ ಸುಖ ಹಾಗೂ ಸದ್ವಿನಿಯೋಗಕ್ಕೆ ಮಾತ್ರ. ನ್ಯಾಯವಾಗಿ ಗಳಿಸಿದ ಹಣವನ್ನು ತ್ಯಾಗ ಮಾಡುವುದು ಶ್ರೇಷ್ಠವೆಂದು ಉಪನಿಷತ್ ವಾಕ್ಯ. ಅದರಿಂದಲೇ ಅಮೃತತ್ವವನ್ನು ಪಡೆಯುತ್ತೇವೆ. (ತ್ಯಾಗೇನೈಕೇ ಅಮೃತತ್ತ್ವಮಾನಶುಃ) ಇವೆಲ್ಲವನ್ನು ಒಳಗೊಂಡ ನರರು ದುರ್ಲಭವೇ ಎಂದು ಕವಿವಾಣಿ.

**ಪ್ರೊ: ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕ

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯ ಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ತತ್ತ್ವಬೋಧಃ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಏತತ್ ಕೋಶಪಂಚಕಂ ಚ ಮದೀಯಂ ಶರೀರಂ ಮದೀಯಾಃ ಪ್ರಾಣಾಃ ಮದೀಯಂ ಮನಃ ಮದೀಯಾ ಬುದ್ಧಿಃ ಮದೀಯಮ್ ಅಜ್ಞಾನಮ್ ಇತಿ ಮದೀಯತ್ವೇನ ಏವ ಜ್ಞಾಯತೇ। ತದ್ ಯಥಾ ಮದೀಯತ್ವೇನ ಜ್ಞಾತಂ ಕುಣ್ಡಲಕಟಕಗೃಹಾದಿಕಂ ಸ್ವಸ್ಮಾದ್ ಭಿನ್ನಂ ತಥಾ ಮದೀಯತ್ವೇನ ಜ್ಞಾತಮ್ ಆತ್ಮಾ ನ ಭವತಿ।**

**ಅನುವಾದ:** ಈ ಐದು ಕೋಶಗಳು 'ನನ್ನ ಶರೀರ', 'ನನ್ನ ಪ್ರಾಣಗಳು', 'ನನ್ನ ಮನಸ್ಸ', 'ನನ್ನ ಬುದ್ಧಿ',' 'ನನ್ನ ಅಜ್ಞಾನ' ಎಂದು 'ನನ್ನದು' ಎಂದು ತಿಳಿಯಲ್ಪಡುತ್ತವೆ. ಹೇಗೆ 'ನನ್ನದು' ಎಂದು ತಿಳಿಯಲ್ಪಡುವ ಕುಂಡಲ, ಕಟಕ, ಮನೆ ಇತ್ಯಾದಿಗಳು ತನಗಿಂತ ಬೇರೆಯಾಗಿರುತ್ತವೆಯೋ, ಹಾಗೆಯೇ ನನ್ನದೆಂದು ತಿಳಿಯಲ್ಪಡುವ ಐದು ಕೋಶಗಳು ಆತ್ಮನಲ್ಲ.

**ವಿವರಣೆ:** ಅಜ್ಞಾನದಿಂದಾಗಿ ಪಂಚಕೋಶಗಳನ್ನೇ ನಾವು ಆತ್ಮನೆಂದು ತಿಳಿದಿರುತ್ತೇವೆ. ಆದರೆ ವಿಚಾರದ ದೃಷ್ಟಿಯಿಂದ ನೋಡಿದಾಗ ಈ ಪಂಚಕೋಶಗಳು ನಮ್ಮ ಸ್ವರೂಪವಲ್ಲ ಎನ್ನುವುದು ತಿಳಿದುಬರುತ್ತದೆ. ಪಂಚಕೋಶಗಳು ಅನಾತ್ಮ ಎನ್ನುವುದಕ್ಕೆ ಆಚಾರ್ಯರು ಒಂದು ಯುಕ್ತಿಯನ್ನು ಇಲ್ಲಿ ತೋರಿಸಿದ್ದಾರೆ. ಯಾವುದು 'ನನ್ನದು' ಎಂದು ಗುರುತಿಸಲ್ಪಡುವುದೋ, ಅದು ತನ್ನ ಸ್ವರೂಪವಾಗಲಾರದು. ಆತ್ಮವು ನಮ್ಮ ಸ್ವರೂಪವೇ ಆದ್ದರಿಂದ ನಮಗಿಂತ ಬೇರೆಯಾದ ವಸ್ತುಗಳಂತೆ 'ನನ್ನದು' ಎನ್ನಿಸಿಕೊಳ್ಳಲಾರದು. ಪಂಚಕೋಶಗಳಂತೂ ನನ್ನದು ಎಂದೇ ಗುರುತಿಸಲ್ಪಡುತ್ತವೆ. ಹಾಗಾಗಿ ಅವು ಅನಾತ್ಮ ಎಂದು ತಿಳಿಯಬೇಕು.

**ತರ್ಹಿ ಆತ್ಮಾ ಕಃ?**

**ಸಚ್ಚಿದಾನಂದಸ್ವರೂಪಃ।**

**ಅನುವಾದ: ಹಾಗಾದರೆ ಆತ್ಮನು ಯಾರು?**

**ಸಚ್ಚಿದಾನಂದಸ್ವರೂಪನು.**

**ವಿವರಣೆ:** ಆತ್ಮನ ಸ್ವರೂಪವು ಸತ್, ಚಿತ್ ಹಾಗೂ ಆನಂದ. ಈ ಮೂರು ಪದಗಳ ಅರ್ಥಗಳನ್ನು ಮುಂದೆ ತಿಳಿಸಲಾಗುವುದು.

ಸತ್ ಕಿಮ್? ಕಾಲತ್ರಯೇಪಿ ಯತ್ ತಿಷ್ಠತಿ ತತ್ ಸತ್।

**ಅನುವಾದ :** ಸತ್ ಎಂದರೇನು? ಯಾವುದು ಮೂರು ಕಾಲಗಳಲ್ಲೂ ಇರುವುದೋ, ಅದು ಸತ್.

**ವಿವರಣೆ:** ಭೂತ, ಭವಿಷ್ಯ ಹಾಗೂ ವರ್ತಮಾನ ಈ ಮೂರೂ ಕಾಲಗಳಲ್ಲಿ ಇರುವುದು ಎಂದರೆ ಯಾವ ಕಾಲದಲ್ಲೂ ಬಾಧಿತವಾಗದಂತಹ ತತ್ವವೇ ಸತ್ ಎನ್ನಲ್ಪಡುತ್ತದೆ. ಕನಸಿನಲ್ಲಿ ಕಾಣುವ ವಸ್ತುಗಳು ಪ್ರತೀತಿಯ ಕಾಲದಲ್ಲಿ ಮಾತ್ರ ಇರುವವಾದ್ದರಿಂದ ಸತ್ ಎನಿಸಿಕೊಳ್ಳಲಾರವು. ವ್ಯಾವಹಾರಿಕವಾದ ಈ ಜಗತ್ತು ಸತ್ಯ ಎಂದು ತಿಳಿಯಲ್ಪಡುತ್ತದೆ. ಆದರೆ ವೇದಾಂತದ ದೃಷ್ಟಿಯಿಂದ ನೋಡಿದರೆ ಈ ಜಗತ್ತು ಮಾಯೆಯಿಂದ ಕಲ್ಪಿತವಾಗಿದೆ. ಹಾಗಾಗಿ ಬ್ರಹ್ಮಜ್ಞಾನವು ಉಂಟಾದಾಗ ಈ ಜಗತ್ತು ಬಾಧಿತವಾಗುತ್ತದೆ. ಹಾಗಾಗಿ ಈ ವ್ಯಾವಹಾರಿಕ ಪ್ರಪಂಚವೂ ಸತ್ ಅಲ್ಲ. ಯಾವ ಸಮಯದಲ್ಲೂ ಬಾಧಿತವಾಗದೆಯೇ ಉಳಿಯುವುದು ಆತ್ಮವೊಂದೇ. ಹಾಗಾಗಿ ಅದು ಮಾತ್ರ ಸತ್ ಎನ್ನಲ್ಪಡುತ್ತದೆ.

**ಚಿತ್ ಕಿಮ್? ಸಾಧನಾಂತರನೈರಪೇಕ್ಷ್ಯೇಣ ಸ್ವಯಂಪ್ರಕಾಶ ಮಾನತಯಾ ಇತರಪದಾರ್ಥಾವಭಾಸಕಂ ಯತ್ ತತ್ ಚಿತ್।**

**ಅನುವಾದ:** ಚಿತ್ ಎಂದರೇನು? ಬೇರೆ ಸಾಧನದ ಅಪೇಕ್ಷೆ ಇಲ್ಲದೆ ಸ್ವಯಂಪ್ರಕಾಶಮಾನವಾಗಿದ್ದು ಇತರ ಪದಾರ್ಥಗಳನ್ನು ಬೆಳಗಿಸುವಂತಹದ್ದು ಚಿತ್।

**ವಿವರಣೆ:** ಚಿತ್ ಅಥವಾ ಚೈತನ್ಯ ಎಂದರೆ ಅರಿವು. ವೇದಾಂತದ ಪ್ರಕಾರ ಅರಿವು ಎಂದರೆ ಬಂದು ಹೋಗುವ ಗುಣವಲ್ಲ. ಅದು ಸದಾಕಾಲ ಇರುವ ಆತ್ಮನ ಸ್ವರೂಪವೇ ಆಗದೆ. ಸೂರ್ಯಾದಿ ಬಾಹ್ಯ ಜ್ಯೋತಿಗಳು ಹೊರಗಿನ ಪದಾರ್ಥಗಳನ್ನು ಬೆಳಗುತ್ತವೆ ಎಂದರೆ ಆ ಪದಾರ್ಥಗಳನ್ನು ತಿಳಿಯಲ್ಪಡುವಂತೆ ಮಾಡುತ್ತವೆ. ಆದರೆ ಸೂರ್ಯಾದಿಗಳು ಕಣ್ಣು ಇತ್ಯಾದಿ ಸಾಧನಗಳ ಸಹಾಯದಿಂದಲೇ ವಸ್ತುಗಳನ್ನು ಬೆಳಗುತ್ತವೆ. ಅದೇ ರೀತಿ ಜಡವಾದ ಇಂದ್ರಿಯಗಳೂ ಸ್ವತಂತ್ರವಾಗಿ ತಮ್ಮ ವಿಷಯಗಳನ್ನು ಬೆಳಗಲಾರವು. ಅವುಗಳೂ ಚೈತನ್ಯದ ಬೆಂಬಲದಿಂದಲೇ ವಿಷಯಗಳನ್ನು ಬೆಳಗುತ್ತವೆ. ಆದರೆ ಚೈತನ್ಯಕ್ಕೆ ಇನ್ನೊಂದು ಚೈತನ್ಯದ ಆವಶ್ಯಕತೆ ಇರುವುದಿಲ್ಲ. ಯಾಕೆಂದರೆ ಅದು ಸ್ವತಃ ಅರಿವೇ ಆಗಿದೆ. ಹಾಗಾಗಿ ಅದನ್ನು ಸ್ವಯಂಪ್ರಕಾಶ ಎನ್ನುವರು. ಅದು ಸ್ವತಃ ಪ್ರಕಾಶಮಾನವಾಗಿದ್ದು ಇತರ ಪದಾರ್ಥಗಳನ್ನು ಪ್ರಕಾಶಿಸುತ್ತದೆ.

**ಆನಂದಃ ಕಃ? ಸುಖಸ್ವರೂಪಃ।**

**ಅನುವಾದ: ಆನಂದವು ಏನು?**

**ಸುಖಸ್ವರೂಪ.**

**ವಿವರಣೆ:** ಪ್ರತಿಯೊಂದು ಜೀವವೂ ಆಗಾಗ ಸುಖವನ್ನು ಅನುಭವಿಸುತ್ತದೆ. ಈ ಕ್ಷಣಿಕವಾದ ಸುಖವು ಆನಂದಮಯ ಕೋಶದಲ್ಲಿ ಉಂಟಾಗಿ ಲೀನವಾಗುವ ವೃತ್ತಿಯ ರೂಪದಲ್ಲಿ ಇರುತ್ತದೆ. ಅದು ಆತ್ಮವಲ್ಲ. ಆತ್ಮನ ಸ್ವರೂಪವಾದ ಸುಖವು ನಿತ್ಯವಾಗಿದೆ. ಸದಾಕಾಲ ಇರುವ ಈ ಸುಖವು ಅಜ್ಞಾನದಿಂದ ಆವೃತವಾಗಿರುತ್ತದೆ.

**ಏವಂ ಸಚ್ಚಿದಾನಂದಸ್ವರೂಪಂ ಸ್ವಾತ್ಮಾನಂ ವಿಜಾನೀಯಾತ್।**

**ಅನುವಾದ :** ಹೀಗೆ ಸಚ್ಚಿದಾನಂದಸ್ವರೂಪನಾದ ತನ್ನ ಆತ್ಮನನ್ನು ತಿಳಿಯಬೇಕು.

**ವಿವರಣೆ :** ಪಂಚಕೋಶಗಳನ್ನೇ ತಮ್ಮ ವಾಸ್ತವ ಸ್ವರೂಪ ಎಂದು ಭಾವಿಸಿ ಅಜ್ಞಾನಿಯು ಸಂಸಾರವನ್ನು ಅನುಭವಿಸುವನು. ಪಂಚಕೋಶಗಳು ಅಥವಾ ಸ್ಥೂಲಾದಿ ಶರೀರಗಳು ಅಸತ್ತೂ ಜಡವೂ ದುಃಖರಪವೂ ಆಗಿವೆ. ಅವುಗಳಿಗಿಂತ ವಿಲಕ್ಷಣವಾದ ಸಚ್ಚಿದಾನಂದಸ್ವರೂಪವನ್ನು ತನ್ನ ವಾಸ್ತವವೆಂದು ತಿಳಿಯುವುದು ಮೋಕ್ಷಕ್ಕೆ ದಾರಿ.

# ಅಧ್ಯಕ್ಷರ ನುಡಿ



**ಆತ್ಮೀಯ ಬಂಧುಗಳೇ,**

ರಾಜ್ಯ ಸರ್ಕಾರವು ಆರ್ಥಿಕವಾಗಿ ದುರ್ಬಲರಾದವರಿಗೆ ಮೀಸಲಿಟ್ಟಿದ್ದ ಶೇ.10 ರಷ್ಟು ಮೀಸಲಾತಿಯನ್ನು ಬೇರೆ ವರ್ಗದವರಿಗೆ ಹಂಚಲು ಮುಂದಾಗಿದೆ. ಇದು ಸರ್ವಥಾ ಖಂಡನೀಯ ಹಾಗೂ ಅನ್ಯಾಯ. ರಾಜ್ಯ ಸರ್ಕಾರದ ಈ ಯೋಜನೆಯ ವಿರುದ್ಧ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ವಿರೋಧಿಸುತ್ತದೆ. ಕೇಂದ್ರ ಸರ್ಕಾರವು ಕಲ್ಪಿಸಿದ ಈ ಮೀಸಲಾತಿಯನ್ನು ಕಡಿಮೆ ಅಥವಾ ಹೆಚ್ಚು ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ.

ಸ್ವಾತಂತ್ರ್ಯ ಬಂದ ದಿನದಿಂದಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಶೇ. 15 ಮತ್ತು 7.5 ರಷ್ಟು ಮೀಸಲಾತಿಯನ್ನು ಜಾರಿಗೊಳಿಸಿದ್ದನ್ನು ಎಲ್ಲ ರಾಜ್ಯ ಸರ್ಕಾರಗಳೂ ಜಾರಿಗೊಳಿಸಿವೆ. ಬೇರೆ ವರ್ಗದವರು ಇದರ ಬಗ್ಗೆ ಚಕಾರವೆತ್ತಲಿಲ್ಲ. 1990ರಲ್ಲಿ ಕೇಂದ್ರ ಸರ್ಕಾರದ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ವಿ.ಪಿ.ಸಿಂಗ್ ಅವರು ದೇಶದ ಹಿಂದುಳಿದ ವರ್ಗದವರಿಗೆ ನ್ಯಾಯ ದೊರಕಿಸುವ ಸಲುವಾಗಿ ಮಂಡಲ್ ಆಯೋಗವನ್ನು ರಚಿಸಿದ್ದರು. ಆ ಆಯೋಗವು ದೇಶದ್ಯಾಂತ ಸಂಚರಿಸಿ, ಅಭಿಪ್ರಾಯಗಳನ್ನು ಸಂಗ್ರಹಿಸಿ, ಇನ್ನಿತರ ದುರ್ಬಲ ವರ್ಗದವರಿಗೆ ಮೀಸಲಾತಿಯನ್ನು ಶಿಫಾರಸ್ಸು ಮಾಡಿತು. ಸರ್ವೋಚ್ಚ ನ್ಯಾಯಾಲಯವು ಕೆಲವು ಅರ್ಜಿಗಳನ್ನು ಸ್ವೀಕರಿಸಿ, ಒಟ್ಟು ಮೀಸಲಾತಿ ಶೇ.50ಕ್ಕಿಂತ ಮೀರಬಾರದು ಎಂಬ ತೀರ್ಪು ನೀಡಿ ಹಲವು ದಶಕಗಳೇ ಕಳೆದಿವೆ. ಕೇಂದ್ರ ಸರ್ಕಾರ, ಎಲ್ಲ ರಾಜ್ಯ ಸರ್ಕಾರಗಳೂ ಆ ತೀರ್ಪನ್ನು ಅಂಗೀಕರಿಸಿ ಅನುಷ್ಠಾನಗೊಳಿಸಿವೆ. 2019ರಲ್ಲಿ ಪ್ರಧಾನ ಮಂತ್ರಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಭಾರತೀಯ ಸಂವಿಧಾನಕ್ಕೆ ತಿದ್ದುಪಡಿ ಮಾಡಿ, ಮೀಸಲಾತಿಗೆ ಒಳಪಡದ ಆರ್ಥಿಕವಾಗಿ ದುರ್ಬಲರಾದ ವರ್ಗದವರಿಗೆ ಶೇ.10 ರಷ್ಟು ಮೀಸಲಾತಿ ಕಲ್ಪಿಸಿದ್ದರು. ಸಂವಿಧಾನದ 103ನೇ ತಿದ್ದುಪಡಿ ತಂದಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಪರಿಶೀಲಿಸಿ, ಸರ್ವೋಚ್ಚ ನ್ಯಾಯಾಲಯವು ಸಾಂವಿಧಾನಿಕ ಪೀಠವನ್ನು ವಜಾಗೊಳಿಸಿ, ಈ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10 ರಷ್ಟು ಮೀಸಲಾತಿ ನೀಡಬೇಕೆಂಬ ಕೇಂದ್ರ ಸರ್ಕಾರದ ನೀತಿಯನ್ನು ಎತ್ತಿಹಿಡಿದಿದೆ. ಈ ನಿರ್ಧಾರದಿಂದ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗಾಗಿ ಸರ್ಕಾರ ನೀಡಿದ ಶೇ.10 ಮೀಸಲಾತಿಯ ಪ್ರಮಾಣವನ್ನು ಶೇ.2ಕ್ಕೆ ಇಳಿಸಿದೆ. ಸರಕಾರವು ವರ್ಗದ ಸಂಖ್ಯಾಬಲ ಇದ್ದವರಿಗೆ ಆದ್ಯತೆ ನೀಡುತ್ತಿದೆ ಅಥವಾ ಹೆಚ್ಚಿನ ಒತ್ತಡ ಹೇರುತ್ತಾರೋ ಅವರಿಗೆ ಪ್ರಾಶಸ್ತ್ಯ ನೀಡುತ್ತಿದೆ. ಪ್ರಜಾಸತ್ತಾತ್ಮಕ ಯುಗದಲ್ಲಿ ಕೇವಲ ಜನಬಲ ಸಾಮರ್ಥ್ಯ ತೋರಿಸಿ ಮೀಸಲಾತಿ ಪಡೆದುಕೊಳ್ಳಲು ಬಹಳಷ್ಟು ವರ್ಗದವರು ಮುಂದಾಗಿರುವುದು ದುರ್ದೈವ, ಈ ಬಗ್ಗೆ ಮಹಾಸಭೆಯು ಪದಾಧಿಕಾರಿಗಳೊಂದಿಗೆ ಚರ್ಚಿಸಿ ಸರ್ಕಾರದ ಈ ನಿರ್ಧಾರ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು. ಪ್ರಜಾಸತ್ತಾತ್ಮಕವಾಗಿ ಎಲ್ಲ ವರ್ಗದವರಿಗೂ ಸಮಾನ ಹಕ್ಕಿದೆ ಎಂಬುದನ್ನು ಮನವರಿಕೆ ಮಾಡಿಕೊಡಲಾಗುವುದು. ಯಾರ ಕಾಲದಿಂದಲೂ ಬ್ರಾಹ್ಮಣ ಸಮುದಾಯವು ಮೀಸಲಾತಿಯನ್ನು ಕೇಳಿಲ್ಲ. ಕೇಂದ್ರ ಸರ್ಕಾರವು ಕಲ್ಪಿಸಿರುವ ಈ ಶೇ.10ರಷ್ಟು ಮೀಸಲಾತಿ ನೀತಿಯನ್ನು ಸರ್ವೋಚ್ಚ ನ್ಯಾಯಾಲಯವು ಒಪ್ಪಿದ್ದು, ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಬದಲಾವಣೆ ಮಾಡಲು ಮುಂದಾಗಿರುವುದು ಕಾನೂನುಬಾಹಿರ. ಆದ್ದರಿಂದ ಮಹಾಸಭೆಯು ಕಾನೂನು ರೀತ್ಯಾ ತಾತ್ವಿಕವಾಗಿ ನ್ಯಾಯಾಲದಲ್ಲಿ ಪ್ರಶ್ನಿಸಲಾಗುತ್ತದೆ. ಒಂದು ಪಕ್ಷ ರಾಜ್ಯ ಸರ್ಕಾರವು ಅದನ್ನು ಜಾರಿಗೊಳಿಸಬೇಕೆಂದು ನಿರ್ಧರಿಸಿದರೆ, ರಾಜ್ಯಾದ್ಯಂತ ಅಹಿಂಸಾತ್ಮಕವಾಗಿ ಪ್ರತಿಭಟನೆ ಕೈಗೊಳ್ಳಲಾಗುವುದು.

ಈ ದಿಶೆಯಲ್ಲಿ ಬ್ರಾಹ್ಮಣರೆಲ್ಲರೂ ಒಟ್ಟಾಗಿ ಹೋರಾಟ ನಡೆಸಬೇಕಾಗಿದೆ. ಪತ್ರಿಕಾ ಮಾಧ್ಯಮ ಹಾಗೂ ವಿದ್ಯುನ್ಮಾನ ಮಾಧ್ಯಮವು ಸರ್ಕಾರದ ಮೀಸಲಾತಿ ನೀತಿಗೆ ಬ್ರಾಹ್ಮಣರ ವಿರೋಧದ ದನಿಗೆ ಹೆಚ್ಚಿನ ಪ್ರಚಾರವನ್ನು ನೀಡಿದ್ದು ಅತ್ಯಂತ ಸಂತೋಷಕರ ಸಂಗತಿ. ಇದರಿಂದ ಸಮುದಾಯದಲ್ಲಿ ಸರ್ಕಾರದ ನೀತಿ ವಿರುದ್ಧ ಜಾಗೃತಿ ಯುಂಟಾಗಲು ಸಹಕಾರಿಯಾಗಿದೆ ಇದೇ ಉತ್ಸಾಹ ಮತ್ತು ಒಗ್ಗಟ್ಟನ್ನು ಮುಂದಿನ ದಿನಗಳ ಹೋರಾಟದಲ್ಲಿ ವಿಪ್ರರು ಪ್ರದರ್ಶಿಸುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ಬ್ರಾಹ್ಮಣರು ಹಾಗೂ ನಮ್ಮ ಎಲ್ಲ ಸಂಘ ಸಂಸ್ಥೆಗಳು ವೈಯಕ್ತಿಕ ಹಿತಾಸಕ್ತಿ ಪ್ರತಿಷ್ಠೆಗಳನ್ನು ಬದಿಗೊತ್ತಿ ಸಮಾಜದ ಹಿತವನ್ನೇ ಮುಖ್ಯವಾಗಿ ಪರಿಗಣಿಸಿ ಒಂದಾಗಿ ಮುಂದುವರೆಯಬೇಕೆಂದು ವಿನಂತಿ.

**ಎಲ್ಲರಿಗೂ ನೂತನ ವರ್ಷದ ಹಾರ್ದಿಕ ಶುಭಾಶಯಗಳು.**

**ಅಶೋಕ ಹಾರನಹಳ್ಳಿ**
**ಮಹಾಸಭಾಧ್ಯಕ್ಷರು.**

## ಸಂಪಾದಕೀಯ

ಆತ್ಮೀಯ ವಿಪ್ರಬಂಧಗಳೇ,

ನಮಸ್ಕಾರ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ಚುನಾಯಿತರಾದ ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿಯವರು ಕೇಂದ್ರ ಕಛೇರಿಯಲ್ಲಿ ದಿನಾಂಕ 06.01.2022ರಂದು ಅಧಿಕಾರ ಸ್ವೀಕರಿಸಿದರು. ಸನ್ಮಾನ್ಯ ಅಧ್ಯಕ್ಷರು ಮಹಾಸಭೆಯನ್ನು ಸಮರ್ಥವಾಗಿ ಮುನ್ನಡೆಸಲು ಸಂಕಲ್ಪಿಸಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ನೂತನ ಕಾರ್ಯಕಾರಿ ಸಮಿತಿ, ಹಲವು ಉಪಸಮಿತಿಗಳ, ಘಟಕಗಳ, ಜಿಲ್ಲಾ ಘಟಕಗಳ ಸ್ಥಾಪನೆ ಮಾಡಿದ್ದು, ಪದಗ್ರಹಣ ಸಮಾರಂಭಗಳು ನಡೆದಿವೆ. ಸನ್ಮಾನ್ಯ ಅಧ್ಯಕ್ಷರು ಹಾಗೂ ಇದರ ಮಾನ್ಯ ಪದಾಧಿಕಾರಿಗಳು ರಾಜ್ಯದ ಉದ್ದಗಲಕ್ಕೂ ನಿರಂತರವಾಗಿ ಸಂಚರಿಸುತ್ತಾ ಬ್ರಾಹ್ಮಣ ಬಂಧುಗಳಲ್ಲಿ ಹೊಸ ಜಾಗೃತಿ ಮೂಡಿಸಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕ ದಲ್ಲಿರುವ ವಿಪ್ರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಹಲವಾರು ವಿನೂತನ ಕಾರ್ಯಕ್ರಮಗಳನ್ನು ರೂಪಿಸಿ, ಯಶಸ್ವಿಯಾಗಿದ್ದಾರೆ. ಈ ವರ್ಷದಲ್ಲಿ ವಿಪ್ರ ಸಂಘಟನೆಗೆ ಒತ್ತು ನೀಡಲಾಗಿದ್ದು, ಸದಸ್ಯತಾ ಅಭಿಯಾನ ಜಾರಿಯಾಗಿ ಬಹಳಷ್ಟು ವಿಪ್ರರು ರಾಜ್ಯಾದ್ಯಂತ ಜಾಲತಾಣದ ಮೂಲಕ ತಾವೇ ಸದಸ್ಯರಾಗಿದ್ದಾರೆ. ಕಳೆದ ಜನವರಿಯ ಸಂಕ್ರಾಂತಿ ಹಬ್ಬದಿಂದ ಆರಂಭಿಸಿ, ಡಿಸೆಂಬರ್‌ನ ಗೀತಾ ಜಯಂತಿಯವರೆಗೆ ಮಹಾಸಭಾ ಕಛೇರಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆಸಲಾಗಿದೆ. ಚಾತುರ್ಮಾಸ್ಯ ಸಮಯದಲ್ಲಿ ತ್ರಿಮತಸ್ಥ ಯತಿವರೇಣ್ಯರಿಗೆ ಮಹಾಸಭಾ ವತಿಯಿಂದ ಗೌರವ ಸಮರ್ಪಣೆ ಮಾಡಿ ಅವರಿಂದ ಅನುಗ್ರಹ ಪಡೆದುಕೊಳ್ಳಲಾಗಿದೆ. ಯತಿವರೇಣ್ಯರು ಮಹಾಸಭೆಯ ಕಾರ್ಯಕ್ರಮವನ್ನು ಅಭಿನಂದಿಸಿದ್ದಾರೆ. ರಾಜ್ಯದ ಹಲವೆಡೆ ನಡೆದ ದೇವಸ್ಥಾನಗಳ ಪ್ರಾರಂಭೋತ್ಸವ, ಕುಂಭಾಭಿಷೇಕ ಗಳಲ್ಲಿ ಸನ್ಮಾನ್ಯ ಅಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿ, ತಮ್ಮ ಸಂಪೂರ್ಣ ಬೆಂಬಲ ಪ್ರದರ್ಶಿಸಿ, ವಿಪ್ರರೆಲ್ಲರಿಗೆ ಧರ್ಮ ಜಾಗೃತಿ ಮೂಡಿಸಿದ್ದಾರೆ. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಮಹಾಸಭಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸನ್ಮಾನ್ಯ ಮುಖ್ಯಮಂತ್ರಿಗಳು, ಮಂತ್ರಿಗಳು ಹಾಗೂ ಶಾಸಕರನ್ನು ಖುದ್ದಾಗಿ ಭೇಟಿ ಮಾಡಿ, ಬ್ರಾಹ್ಮಣರ ಸ್ಥಿತಿಗತಿ, ಸಮಾಜದಲ್ಲಿ ವಿಪ್ರರ ಸ್ಥಾನದ ಬಗ್ಗೆ ಮಾಹಿತಿ ನೀಡಿ, ಮಂಡಳಿ ಹಾಗೂ ಶ್ರೀಮಠಗಳಿಗೆ ಸರ್ಕಾರದ ಅನುದಾನ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಸರ್ಕಾರ, ಸಮಾಜ ದಲ್ಲಿ ಉನ್ನತ ಹುದ್ದೆಗಳಲ್ಲಿರುವ, ನಿವೃತ್ತರಾದ ವಿಪ್ರ ಅಧಿಕಾರಿಗಳು, ಗಣ್ಯರ ವಿಶೇಷ ಸಭೆಯುನ್ನು ಕರೆದು ಮುಂದಿನ ಚಟುವಟಿಕೆಗಳಿಗೆ ಅವರ ಸಹಾಯ ಕೋರಲಾಗಿದೆ. ವಿಭಿನ್ನ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿ ಕೇಂದ್ರ ಸರ್ಕಾರದ ನಾಗರಿಕ ಪ್ರಶಸ್ತಿಗಳಾದ ಪದ್ಮಭೂಷಣ, ಪದ್ಮಶ್ರೀ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ವಿಪ್ರಗಣ್ಯರಿಗೆ ಸನ್ಮಾನ ಮಾಡಲಾಗಿದೆ. ಅಂತೆಯೇ ಬ್ರಾಹ್ಮಣ ಯುವಕ ಯುವತಿಯರ ಅಸಾಧಾರಣಾ ಪ್ರತಿಭೆಗಳನ್ನು ಗುರುತಿಸಿ, ಎಸ್.ಎಸ್.ಎಲ್.ಸಿ. ಪಿ.ಯು.ಸಿ. ಯಲ್ಲಿ ಅತ್ಯುನ್ನತ ದರ್ಜೆಗಳಲ್ಲಿ ತೇರ್ಗಡೆಯಾದವರಿಗೆ ಪ್ರತಿಭಾ ಪುರಸ್ಕಾರ ಮಾಡಲಾಗಿದೆ. ಗೌರಿಬಿದನೂರಿನಿಂದ ವಿದುರಾಶ್ವತ್ಥದವರೆಗೆ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿಶೇಷ ಪಾದಯಾತ್ರೆ ಹಮ್ಮಿಕೊಂಡು, ಅದರಲ್ಲಿ ಸಹಸ್ರಾರು ವಿಪ್ರರು ಭಾಗವಹಿಸಿ, ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು.

ಇಷ್ಟೆಲ್ಲ ವೈವಿಧ್ಯಮಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ, ಸಮರ್ಥವಾಗಿ ಬಿಂಬಿಸಲು ಮಹಾಸಭೆಯ ಮುಖವಾಣಿಯಾದ "ವಿಪ್ರನುಡಿ" ಮಾಸಿಕ ಸಂಚಿಕೆಯು ಹೊಸ ವಿನ್ಯಾಸದಲ್ಲಿ ಪ್ರಕಟವಾಗಿದ್ದು, ಹಲವಾರು ವರದಿಗಳ ಜೊತೆಗೆ ವಿಚಾರ-ತತ್ತ್ವಬೋಧಕ ಲೇಖನಗಳನ್ನು ಒಳಗೊಂಡಿದೆ. ವಿಪ್ರನುಡಿಯ ಆಂಗ್ಲ ಆವೃತ್ತಿ, ನೂತನ ಜಾಲತಾಣ ಯುಟ್ಯೂಬ್ ಚಾನೆಲ್‌ಗಳ ಪ್ರಾರಂಭ ಈ ವರ್ಷದ ಹೆಗ್ಗಳಿಕೆ.

ಸನ್ಮಾನ್ಯ ಅಧ್ಯಕ್ಷರು ಅಧಿಕಾರ ಸ್ವೀಕರಿಸಿದ ಹೊಸದರಲ್ಲಿ ವಿಪ್ರನುಡಿಗೆ ವಿಶೇಷ ಸಂದರ್ಶನವನ್ನು ನೀಡಿ, ಭಾವಿ ಯೋಜನೆಗಳ ಬಗ್ಗೆ ವಿಸ್ತಾರ ವಾಗಿ ಪ್ರಸ್ತಾಪಿಸಿದ್ದರು. ಅವುಗಳಲ್ಲಿ ಬಹಳಷ್ಟು ಕಾರ್ಯಗತವಾಗಿವೆ ಎಂದು ತಿಳಿಸಲು ಹರ್ಷವಾಗುತ್ತದೆ. ಖ್ಯಾತ ವಿಪ್ರ ಉದ್ಯಮಿಗಳು, ದಾನಿಗಳು, ಸ್ವಯಂಪ್ರೇರಿತರಾಗಿ ಮುಂದೆ ಬಂದು ಮಹಾಸಭೆಯ ವಿವಿಧ ಯೋಜನೆಗಳಿಗೆ ಉದಾರವಾಗಿ ಧನಸಹಾಯ ಮಾಡಿದ್ದಾರೆ. ಅವರಿಗೆ ಮಹಾಸಭೆಯ ಪರವಾಗಿ ಅನಂತ ಕೃತಜ್ಞತೆಗಳು. ಕಳೆದ ಒಂದು ವರ್ಷದಲ್ಲಿ ಹಲವಾರು ಹಿರಿಯ ವಿಪ್ರಗಣ್ಯರು ನಮ್ಮನ್ನಗಲಿದ್ದಾರೆ. ಅವರಿಗೆ ನಮ್ಮ ಭಕ್ತಿಪೂರ್ವಕ ಶ್ರದ್ಧಾಂಜಲಿಗಳು.

ವರ್ಷವಿಡೀ ವಿನೂತನ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕ್ರಿಯಾತ್ಮಕವಾಗಿ ಜಾರಿಗೊಳಿಸಬೇಕಾದರೆ, ಅಸಾಧಾರಣ ದೂರದೃಷ್ಟಿ, ಅಪಾರವಾದ ಸಹನೆ, ಕ್ರತುಶಕ್ತಿ ಅಗತ್ಯ. ಸನ್ಮಾನ್ಯ ಅಧ್ಯಕ್ಷರು, ಸಂಘಟನಾ ಕಾರ್ಯದರ್ಶಿಗಳು, ಎಲ್ಲಾ ಪದಾಧಿಕಾರಿಗಳು, ಹಲವು ಸಮಿತಿಗಳ ಸದಸ್ಯರು, ವಿಪ್ರ ಸಮುದಾಯ ಒಂದೆಡೆ ಸೇರಿ, ಸಾಂಘಿಕವಾಗಿ ದೃಢಗೊಂಡು, ಮುಂದಕ್ಕೆ ತ್ರಿವಿಕ್ರಮ ಹೆಜ್ಜೆ ಇಡುತ್ತಿರುವುದು ಬಹಳ ಸಂತೋಷದ ಸಂಗತಿ. ಎಲ್ಲರಿಗೂ, ಸಂಪಾದಕ ಮಂಡಳಿ ಸದಸ್ಯರಿಗೂ ಅನಂತ ಕೃತಜ್ಞತೆಗಳು. ನೂತನ ವರ್ಷದಲ್ಲಿ ಇನ್ನಷ್ಟು ಹೊಸ ಕಾರ್ಯಕ್ರಮಗಳಿಗೆ ತಮ್ಮೆಲ್ಲರ ಸಹಾಯ, ಸಹಕಾರ ಬಹಳ ಅತ್ಯಗತ್ಯ.

ವಂದನಗಳೊಂದಿಗೆ,

**ತಮ್ಮ ವಿಶ್ವಾಸಿ,**
**ಪ್ರೊ. ಎಂ.ಕೆ. ಶ್ರೀಧರ್**
**ಪ್ರಧಾನ ಸಂಪಾದಕ**


### ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ದತ್ತ ಕ್ಷೇತ್ರದಲ್ಲಿ ವಿಜೃಂಭಿಸಿದ ವಿಪ್ರ ಸಮುದಾಯ

## ನಿಂದಕರ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ



ದೇವಲ ಗಾಣಗಾಪುರದ ದಂಡಾವತಿ ಮಠದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಸೋಮವಾರ ಆಯೋಜಿಸಿದ್ದ ವಿಪ್ರ ಅರ್ಚಕ ಮತ್ತು ಪುರೋಹಿರ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿದ ಅವರು ನಮ್ಮ ಪುರಾತನ ಧರ್ಮ ಅಜರಾಮರ. ಸಾಮಾನ್ಯ ಜನರೊಂದಿಗೆ ಬೆರೆಯುವ ನೀವೆಲ್ಲರೂ ದೈವತ್ವದ ಬಗ್ಗೆ ತಿಳಿಸಬೇಕು. ಬೇರೆ ಸಮಾಜ ನೋಡಿ ಅನುಕರಣೆ ಮಾಡದೆ ಆ ಸಮುದಾಯಕ್ಕೆ ಸಂದೇಶ ನೀಡುವಂತಾಗಬೇಕು ಎಂದು ಕರೆ ನೀಡಿದರು.

ನಮ್ಮನ್ನು ನಿಂದಿಸುವವರು ಮೊದಲಿ ನಿಂದಲೂ ಇದ್ದಾರೆ. ಆದರೆ ಸೋಷಿಯಲ್ ಮೀಡಿಯಾದವ ರಿಂದ ಹೆಚ್ಚಾಗಿದೆ. ಮೊದಲು ನಾವೆಲ್ಲ ಇವನು ಭೈದ, ಆತ ಭೈದ ಎಂಬುದನ್ನು ಶೇರ್ ಮಾಡುವುದನ್ನು ಬಿಡಬೇಕು. ಯಾವನೋ ಒಬ್ಬ ಕಿಡಿಗೇಡಿ ಕೃತ್ಯಕ್ಕೆ ತಲೆಕಡಿಸಿಕೊಳ್ಳುವ ಅಗತ್ಯವಿಲ್ಲ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿಯವರು ಸಲಹೆ ನೀಡಿದರು.





"ಯಾರೋ ವಿಐಪಿಗಳಿಗಾಗಿ ನಮ್ಮ ವೈದಿಕ ವಿಚಾರಗಳನ್ನು ಬಿಟ್ಟು ನಡೆಯಬಾರದು. ಧರ್ಮ ರಕ್ಷಣೆಗಾಗಿ ಜಿಲ್ಲಾ, ತಾಲ್ಲೂಕು ಕೇಂದ್ರ ಗಳಲ್ಲಿ ನಿರಂತರ ಶಿಬಿರ ನಡೆಯಲಿ. ಸನಾತನ ದೇಶದ ಅತ್ಯುನ್ನತ ಶ್ರೇಷ್ಠ ಧರ್ಮದಲ್ಲಿ ಜನಿಸಿದ ನಾವೆಲ್ಲರೂ ಪುಣ್ಯವಂತರು. ಆದರೆ ನಮ್ಮಲ್ಲಿ ಒಗ್ಗಟ್ಟು ಮತ್ತು ಕೇಳುವವರು ಇಲ್ಲದ್ದರಿಂದ ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣರ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಬೇರೆ ಧರ್ಮಗಳಿಗೆ ಮತಾಂತರ ಆಗುತ್ತಿದ್ದಾರೆ."

–ಅಶೋಕ ಹಾರನಹಳ್ಳಿ

### ಲೋಕಕಲ್ಯಾಣಾರ್ಥ ದತ್ತಮಾಲಾ ಮಂತ್ರ ಹೋಮ

ಬೆಳಿಗ್ಗೆ 7.00ಕ್ಕೆ ಶ್ರೀ ದತ್ತಾತ್ರೇಯುರಿಗೆ ಫಲ ಸಮರ್ಪಣೆ, 7.30 ರಿಂದ ಶಂಕರ ಮಠದ ಪ್ರಾಂಗಣದಲ್ಲಿ ಶ್ರೀ ಗಣಪತಿ ಪೂಜೆ, ಚತುರ್ವೇದ ಪಾರಾಯಣ, ಉಪನಿಷತ್ ಪಾರಾಯಣ, ಗೀತಾ ಪಾರಾಯಣ, ದತ್ತ ಮಾಲಾ ಜಪ, ಹವನ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಆಗಮಿಸಿದ ಅರ್ಚಕರಿಂದ ವೇದ–ಮಂತ್ರಗಳು ಮೊಳಗಿದವು. ಹೋಮ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ್, ಶಾಸಕ ಎಂ.ವೈ. ಪಾಟೀಲ್, ಮಾಜಿ ಎಂ.ಎಲ್.ಸಿ. ಇತರರಿದ್ದರು.



**"ರಾಜ್ಯದಲ್ಲಿ ಮುಜರಾಯಿ ಇಲಾಖೆಯಲ್ಲಿ 40 ದೇವಸ್ಥಾನಗಳಿವೆ. ಅದರಲ್ಲೂ 'ಎ' ಶ್ರೇಣಿ ದೇಗುಲಗಳಲ್ಲಿ ನಿತ್ಯವೂ ವೇದ-ಪಾರಾಯಣ ನಡೆಸಬೇಕು ಎಂದು ಇಲಾಖೆ ಆದೇಶ ಹೊರಡಿಸಬೇಕು. ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿ ವೇದಪಾರಾಯಣ ಹಾಗೂ ಧರ್ಮ ರಕ್ಷಣೆ ಕಾರ್ಯ ನಿರಂತರ ಸಾಗಲಿ."**

**ಡಾ. ಬಿ.ಎಸ್. ರಾಘವೇಂದ್ರ ಭಟ್, ಪರಿಷತ್ ಕಾರ್ಯಾಧ್ಯಕ್ಷರು**

## ಗಾಯತ್ರಿ ಭಾವಚಿತ್ರದ ಭವ್ಯ ಮೆರವಣಿಗೆ

**ಹೋಮದ ಬಳಿಕ ಅಲಂಕೃತ ವಾಹನದಲ್ಲಿ ವೇದಮಾತೆ ಶ್ರೀ ಗಾಯತ್ರಿ ದೇವಿ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಶ್ರೀ ದತ್ತಾತ್ರೇಯ ದೇವಸ್ಥಾನದಿಂದ ಶಂಕರ ಮಠದವರೆಗೆ ನಡೆದ ಮೆರವಣಿಗೆ ಯುದ್ದಕ್ಕೂ ಅರ್ಚಕರಿಂದ ಮಂತ್ರಘೋಷ ಮೊಳಗಿದರೆ, ಮಹಿಳೆಯರು ದಾಸರ ಪದಗಳನ್ನು ಹಾಡಿ ಭಕ್ತಿ ಮೆರೆದರು.**



ಪರಿಷತ್ ಅಧ್ಯಕ್ಷ ವೇದಮೂರ್ತಿ ವಿಶ್ವೇಶ್ವರ ಭಟ್ ಮಾತನಾಡಿ, ಪರಿಷತ್ ಆರಂಭಿಸಿದ ಬಳಿಕೆ ಹೆಚ್ಚಚ್ಚು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ಸಮಾವೇಶ ಅರ್ಚಕರ ಸಮಾಗಮ ಜತೆಗೆ ಪರಿಷತ್‌ನ ಮುಂದಿನ ಕಾರ್ಯಗಳಿಗೆ ಶಕ್ತಿ ತುಂಬಿದೆ. ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ಕಾರ್ಯಕ್ರಮ ನಡೆಸಲಾಗುವುದು ಎಂದು ಪ್ರಕಟಿಸಿದರು.

ಪರಿಷತ್ ಕಾರ್ಯಾಧ್ಯಕ್ಷ ಡಾ॥ ಬಿ.ಎಸ್. ರಾಘವೇಂದ್ರ ಭಟ್ ಮಾತನಾಡಿ, ಮುಖ ನೋಡಿ ಬ್ರಾಹ್ಮಣ ಎನ್ನಲ್ಲ. ಅವನಲ್ಲಿರುವ ಸಂಸ್ಕಾರದಿಂದ ಬ್ರಾಹ್ಮಣತ್ವ ಬರುತ್ತದೆ. ಸಮಾಜ ಮತ್ತು ಪುರೋಹಿತರನ್ನು ನಿಂದಿಸುವವರಿಗೆ ಸಮೃದ್ಧ ಕೊಡು ಎಂದು ವೇದ ಪಾರಾಯಣ ಹಾಗೂ ಹೋಮದ ಮೂಲಕ ಶ್ರೀ ದತ್ತಾತ್ರೇಯರಲ್ಲಿ ಪ್ರಾರ್ಥಿಸಿದ್ದೇವೆ. ಬೀದರ್‌ನಿಂದ ಚಾಮರಜನಗರದವರೆಗಿನ ತ್ರಿಮತಸ್ಥರು ಒಂದೆಡೆ ಸೇರಿದ್ದು ಐತಿಹಾಸಿಕ ಎಂದು ಸಂತಸ ವ್ಯಕ್ತಪಡಿಸಿದರು.

ಮಣ್ಣೂರ ವೇದೇಶತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಪಂ. ಅನಂತಾಚಾರ್ಯ ಅಕಮಂಚಿ ಮಾತನಾಡಿದರು. ಪರಿಷತ್ ಜಿಲ್ಲಾಧ್ಯಕ್ಷ ಗುಂಡಾಚಾರ್ಯ ಜೋಶಿ ನರಿಬೋಳ ಅಧ್ಯಕ್ಷತೆ ವಹಿಸಿದ್ದರು.

ಪರಿಷತ್ ಕಾರ್ಯದರ್ಶಿ ವೇದಮೂರ್ತಿ ಭಾನುಪ್ರಕಾಶ್ ಶರ್ಮ, ಗಾಣಗಾಪುರ ನಿರ್ಗುಣ ಮಠದ ಮುಖ್ಯ ಅರ್ಚಕ ಭೀಮಭಟ್ಟ ಚಿಂತಾಮಣಿಭಟ್ಟ ಪೂಜಾರಿ, ಗಂಗ್ರೋತಿ ವೇದ ಪಾಠಶಾಲೆ ಸಂಸ್ಥಾಪಕ ಮೋಹನಭಟ್ಟ ಪೂಜಾರಿ, ಹರಿದಾಸ ಸಾಹಿತ್ಯ ಪ್ರಚಾರ ವಾಹಿನಿ ಅಧ್ಯಕ್ಷ ಪಂ. ಗೋಪಾಲಾಚಾರಿ ಅಕಮಂಚಿ, ಕುಲಬುರಗಿ ಉತ್ತರಾದಿ ಮಠದ ಮಠಾಧಿಕಾರಿ ರಾಮಾಚಾರ್ಯ ಘಂಟಿ, ಪ್ರಮುಖರಾದ ಬಾಲಕೃಷ್ಣ ಮಹಾರಾಜ, ಕೇಶವ ಅವಧಾನಿ, ದತ್ತಾತ್ರೇಯ ಭಟ್ಟ ಪೂಜಾರಿ, ಪ್ರಹ್ಲಾದಭಟ್ಟ ಪೂಜಾರಿ, ರವಿ ಲಾತೂರಕರ್, ಪ್ರಖ್ಯಾತ ಪೂಜಾರಿ ಉದ್ಯಮಭಟ್ಟ ಪೂಜಾರಿ, ಉದಯಭಟ್ಟ ಪೂಜಾರಿ,, ಪ್ರಿಯಾಂಕ್ ಪೂಜಾರಿ, ವೆಂಕಟೇಶ ಕುಲಕರ್ಣಿ, ಚಿತ್ತಾಪುರ, ವಿಜಯ ಭಟ್ಟ ಪೂಜಾರಿ, ಅರುಣಭಟ್ ಪೂಜಾರಿ, ನಂದಕುಮಾರ ಪೂಜಾರಿ, ಚಂದ್ರವಿಲಾಸ ಭಟ್ಟ, ರಾಜೇಂದ್ರ ಭಟ್ಟ, ದಿಲೀಪ್ ಭಟ್ಟ ಪೂಜಾರಿ, ಕರುಣಾಕರ ಭಟ್ಟ ಪೂಜಾರಿ, ದತ್ತಾತ್ರೇಯ ಜೋಶಿ, ವಾಸುದೇವ ಕಟ್ಟಿ, ರಘೋತ್ತಮಾಚಾರ್ಯ ಘಂಟಿ, ವೆಂಕಟೇಶ್ ಮಾಲಗತ್ತಿ,

**"ರಾಜ್ಯದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಸ್ಥಾನಗಳಿಗೆ ಸರ್ಕಾರ ಮುಕ್ತಿ ನೀಡಬೇಕು. ಪುರೋಹಿತರಿಗೆ ದೇಗುಲಗಳನ್ನು ನೀಡಿದರೆ ಚ್ಯುತಿ ಬರದಂತೆ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲಾಗುವುದು. ಸಮಾಜದಲ್ಲಿ ಯಾವುದೇ ಕಾರ್ಯ ನಡೆಯಬೇಕಾದರೂ ಪುರೋಹಿತರು ಬೇಕು. ಹೀಗಾಗಿ ನಮಗೆ ಗೌರವಯುತ ಸ್ಥಾನ ನೀಡಬೇಕಾಗಿದೆ. ಅದನ್ನು ಉಳಿಸಿಕೊಂಡು ಹೋಗುವ ಕೆಲಸವಾಗಬೇಕು."**

**ಗುಂಡಾಚಾರ್ಯ ಜೋಶಿ ನರಿಬೋಳ**

**ಜಿಲ್ಲಾಧ್ಯಕ್ಷ,**

**ಬ್ರಾಹ್ಮಣ ಅರ್ಚಕ ಮತ್ತು ಪುರೋಹಿತರ ಪರಿಷತ್**

# ಬ್ರಾಹ್ಮಣರ ಮೀಸಲಾತಿ ಕಡಿತದ ಹುನ್ನಾರ. ಸಂಘಟಿತರಾಗಲು ಬ್ರಾಹ್ಮಣರಿಗೆ ಕರೆ. ಸರ್ಕಾರದ ಮೇಲೆ ಒತ್ತಡ ಹೇರಲು ಮಹಾಸಭೆ ನಿರ್ಧಾರ



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಧಾರವಾಡದ ಶಂಕರಾಚಾರ್ಯ ಪಾಠಶಾಲೆ ಆವರಣದಲ್ಲಿ ನಡೆದ ಋಗ್ವೇದ ಸಂಹಿತಾ ಮಹಾಯಾಗದಲ್ಲಿ ಪಾಲ್ಗೊಂಡರು. ಅವರೊಡನೆ ಶ್ರೀ ರಾಘವೇಂದ್ರ ಭಟ್, ಶ್ರೀ ವಿಶ್ವೇಶ್ವರ ಭಟ್, ಶ್ರೀ ಭಾನುಪ್ರಕಾಶ್ ಶರ್ಮಾ, ಶ್ರೀ ಪ್ರಮೋದ್ ಮುನೋಲಿ, ಶ್ರೀ ಸುಧಾಕರ ಬಾಬು, ಶ್ರೀ ಜಯಸಿಂಹ ಶತ್ರುಘ್ನ ಅವರೂ ಸಹ ಭಾಗವಹಿಸಿದರು.**



ರಾಜ್ಯ ಸರಕಾರ ಬ್ರಾಹ್ಮಣರ ಮೀಸಲಾತಿ ಪ್ರಮಾಣವನ್ನು ಕಡಿಮೆಗೊಳಿಸಿದ್ದು, ನಾವೆಲ್ಲ ಬ್ರಾಹ್ಮಣರು ಸಂಘಟಿತರಾಗಿ ಬೇಡಿಕೆಗಳ ಈಡೇರಿಕೆಗೆ ಸರಕಾರದ ಮೇಲೆ ಒತ್ತಡ ತರಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಹಾಗೂ ಲೋಕ ಶಿಕ್ಷಣ ಟ್ರಸ್ಟ್ ಧರ್ಮದರ್ಶಿ ಅಶೋಕ ಹಾರನಹಳ್ಳಿ ಹೇಳಿದರು.

ನಗರದ ಶ್ರೀಮದ್ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯ ಆವರಣದಲ್ಲಿ ಲೋಕ ಕಲ್ಯಾಣಾರ್ಥವಾಗಿ 6 ದಿನಗಳ ಕಾಲ ನಡೆದ ಋಗ್ವೇದ ಸಂಹಿತಾ ಮಹಾಯಾಗದ ಪೂರ್ಣಾಹುತಿ ನಂತರ ಶುಕ್ರವಾರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗಾಗಿ ಸರಕಾರ ಶೇ.10ರಷ್ಟು ಮೀಸಲಾತಿ ನೀಡಿತ್ತು, ಆದರೆ ಈಗ ಬ್ರಾಹ್ಮಣರ ಮೀಸಲಾತಿ ಪ್ರಮಾಣವನ್ನು ಶೇ.2ಕ್ಕೆ ಇಳಿಸಿದೆ.

ಸರಕಾರ ಸಂಖ್ಯಾಬಲ ಇದ್ದವರಿಗೆ ಆದ್ಯತೆ ನೀಡುತ್ತದೆ. ಯಾರು ಒತ್ತಡ ಹೇರುತ್ತಾರೋ ಅವರಿಗೆ ಪ್ರಾಶಸ್ತ ನೀಡಲಾಗುತ್ತದೆ. ಜನಬಲದ ಸಾಮರ್ಥ್ಯ ತೋರಿಸಿ ಮೀಸಲಾತಿ ಪಡೆದುಕೊಳ್ಳುವ ಸ್ಥಿತಿ ಬಂದಿರುವುದು ದುರ್ದೈವ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕಿದೆ ಎಂಬುದನ್ನು ಮನಗಾಣಬೇಕು ಎಂದು ಅಭಿಪ್ರಾಯಪಟ್ಟರು.

ಸನಾತನ ಧರ್ಮ ರಕ್ಷಣೆ ನಮ್ಮ ಹೊಣೆ. ಖಡ್ಗ ಹಿಡಿದು ಮತಪ್ರಚಾರ ಮಾಡುವ ಧರ್ಮ ನಮ್ಮದಲ್ಲ. ನಮ್ಮ ಋಷಿ ಪ್ರಣೀತ ಸನಾತನ ಧರ್ಮವನ್ನು ಉಳಿಸಿಕೊಂಡು ಬರುವಲ್ಲಿ ಬ್ರಾಹ್ಮಣರ ಕೊಡುಗೆ ಮಹತ್ವದ್ದಾಗಿದೆ. ನಮ್ಮ ಆಚಾರ-ವಿಚಾರ ಶುದ್ಧವಾಗಿರಬೇಕು. ನಾವು ವೇದಾಧ್ಯಯನದಲ್ಲಿ ತೊಡಗಿಕೊಂಡರೆ, ಸಂಪ್ರದಾಯ, ಸಂಸ್ಕೃತಿ ಉಳಿಸಿಕೊಂಡರೆ ಎಷ್ಟೇ ಸಾಂಸ್ಕೃತಿಕ ದಾಳಿಯಾದರೂ ಸನಾತನ ಧರ್ಮಕ್ಕೆ ಹಾನಿ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವೇದ ವಿದ್ಯಾರ್ಜನೆಗೆ ಸಹಕಾರ ನೀಡಲಿದೆ. ವೇದಪಾರಂಗತರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಗುವುದು ಎಂದು ನುಡಿದರು.

ಬ್ರಾಹ್ಮಣರು ವಿದ್ಯೆಗೆ ಆದ್ಯತೆ ನೀಡಬೇಕು. ಸಂಪ್ರದಾಯದಿಂದ ವಿಮುಖರಾದರೆ ನಮ್ಮ ಸಮಸ್ಯೆಗಳು ಇನ್ನಷ್ಟು ಹೆಚ್ಚಾಗಲಿವೆ ಎಂಬುದನ್ನು ವಿಪ್ರ ಬಾಂಧವರು ಅರ್ಥ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

# ಗದಗನಲ್ಲಿ ಮಹಾಸಭಾ ದಿನದರ್ಶಿ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ

## ಬ್ರಾಹ್ಮಣ ಸಮುದಾಯ ಅಭಿವೃದ್ಧಿಗೆ ಹಲವು ಯೋಜನೆ

–ಅಶೋಕ ಹಾರನಹಳ್ಳಿ



ಗದಗ: ಬ್ರಾಹ್ಮಣ ಸಮುದಾಯದ ಸಬಲೀಕರಣಕ್ಕೆ ಮಹಾಸಭಾ ವತಿಯಿಂದ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದರು.

ನಗರದ ಶಂಕರಮಠದಲ್ಲಿ ಶುಕ್ರವಾರ ನಡೆದ 2023ನೇ ವರ್ಷದ ದಿನದರ್ಶಿಕೆ ಬಿಡುಗಡೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಒಂದೇ ಕೂಗಿನಲ್ಲಿ ಬ್ರಾಹ್ಮಣರನ್ನು ಬಡಿದೆಬ್ಬಿಸಲು ಆಗುತ್ತಿಲ್ಲ. ಪ್ರತಿಯೊಬ್ಬರಿಗೂ ಸ್ವತಂತ್ರ ಆಲೋಚನೆಗಳು ಇವೆ. ಒಬ್ಬರು ಹೇಳಿದ್ದನ್ನೇ ಎಲ್ಲರೂ ಕೇಳಬೇಕು ಎಂಬ ಮನೋಭಾವ ಇಲ್ಲ. ಆದರೆ, ಪ್ರತಿಯೊಂದಕ್ಕೂ ಸರ್ಕಾರದ ಮುಂದೆ ನಾವು ದೇಹಿ ಎಂದು ನಿಂತು ಕೊಳ್ಳುವುದು ಸಾಧ್ಯವಿಲ್ಲ. ಸಮುದಾಯ ಬಲಗೊಳ್ಳಬೇಕಾದರೆ ಸಂಘಟನೆಗಳು ರಚನಾತ್ಮಕವಾಗಿ ಕೆಲಸ ನಿರ್ವಹಿಸಬೇಕು ಎಂದು ಹೇಳಿದರು.

ಆರ್ಥಿಕ ದುರ್ಬಲ ವರ್ಗದವರಿಗೆ ಶೇ.10 ಮೀಸಲಾತಿ ಜಾರಿಗೊಳಿಸಿ ಎಂದು ಕೇಳಿದರೆ ಸರ್ಕಾರ ಅದನ್ನು ಕಿತ್ತು, ಒಕ್ಕಲಿಗರಿಗೆ, ಲಿಂಗಾಯಿತರಿಗೆ ಭಾಗ ಮಾಡಲು ಹೊರಟಿದೆ. ಆದರೆ ಇದು ಕಾನೂನು ಪ್ರಕಾರ ನಿಲ್ಲುವುದಿಲ್ಲ. ಬ್ರಾಹ್ಮಣ ಸಮಾಜ ಸುಮ್ಮನಿರುವುದಕ್ಕೆ ಸರ್ಕಾರ ಅತಿರೇಕ ಮಾಡುತ್ತಿದ್ದು, ಒಂದು ವೇಳೆ ಆ ರೀತಿ ಮಾಡಿದರೆ ಕೋರ್ಟ್ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಆರ್ಥಿಕ ದುರ್ಬಲರು ಎಂದರೆ ಎಲ್ಲಾ ಒಂದೇ ಗುಂಪಿಗೆ ಬರುತ್ತಾರೆ. ಆದರೆ ಸರ್ಕಾರ ಬೇಕಂತಲೇ ಜನರ ಕಣ್ಣಿಗೆ ಮಣ್ಣೆರೆಚುವ ಕೆಲಸ ಮಾಡುತ್ತಿದೆ. ಇದು ಜಾರಿಗೆ ಬರುವುದಿಲ್ಲವೆಂಬುದು ಜನರಿಗೂ ಗೊತ್ತಿದೆ. ಆದರೂ, ಸರ್ಕಾರ ಆಸೆ ತೋರಿಸುತ್ತಿದೆ ಎಂದು ಹೇಳಿದರು.

ಎಲ್ಲ ಬ್ರಾಹ್ಮಣರು, ಸ್ವಾಮೀಜಿಗಳನ್ನು ಒಂದೇ ವೇದಿಕೆಗೆ ತಂದು ಸಮಾವೇಶ ಮಾಡಲಾಗುವುದು. ಇದೇ ಸಂದರ್ಭದಲ್ಲಿ ಯಾಜ್ಞವಲ್ಕರು ಮತ್ತು ಗಾಯತ್ರಿ ರಥ ಹೊರಡಿಸಿ ರಾಜ್ಯದೆಲ್ಲೆಡೆ ಸಂಚರಿಸಿದ ಬಳಿಕ ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡುವ ಯೋಜನೆ ಇದೆ ಎಂದರು.

ಬ್ರಾಹ್ಮಣರನ್ನು ಯಾವ ರೀತಿ ಸದೃಢಗೊಳಿಸಬೇಕು ಎಂಬ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುವುದು. ಮಹಿಳಾ ಮತ್ತು ಯುವ ಸಮಾವೇಶ ಮಾಡುವ ಯೋಚನೆ ಇದೆ. ಅದೇ ರೀತಿ ಕಡುಬಡವರಿಗೆ ತಿಂಗಳಿಗೆ ರೂ.500/= ಕೊಡುವ ಪಿಂಚಣಿ ಯೋಜನೆ ರೂಪಿಸಲಾಗಿದೆ. ಔಷಧಿ ವಿತರಣೆ ಕಂಪನಿಗಳ ಜತೆಗೆ ಮಾತನಾಡಿದ್ದು ದೀರ್ಘಕಾಲೀನ ಆರೋಗ್ಯ ಸಮಸ್ಯೆ ಇದ್ದವರಿಗೆ ಉಚಿತ ಔಷಧಿ ವಿತರಿಸಲಾಗುವುದು ಎಂದರು. ಡಾ. ವಿಶ್ವನಾಥ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ, ಕಿರಣ ಕುಲಕರ್ಣಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲೆಯ ವಿವಿಧ ಬ್ರಾಹ್ಮಣ ಸಂಘ ಸಂಸ್ಥೆಗಳಿಗೆ ಗೌರವ ಸಮರ್ಪಣೆ ಮಾಡಲಾಯಿತು.

ಸಹ ಕಾರ್ಯದರ್ಶಿ ವಿಜಯ್ ನಾಡಜೋಶಿ, ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟೇಶ್ ಕುಲಕರ್ಣಿ, ರತ್ನಾಕರ ಭಟ್ ಜೋಶಿ, ಮುಖಂಡರಾದ ಕಾರ್ತಿಕ್ ಎಸ್. ಬಾಪಟ್, ಕಲಾವತಿ, ಗುರಣ್ಣಾ ಬಾಳಿಗನೂರು ಇದ್ದರು.



# ಬ್ರಾಹ್ಮಣರು ಸತ್ಯಮೇವ ಜಯತೇ ವಾಕ್ಯದಡಿ ನಂಬಿಕೆಯುಳ್ಳವರು – ಶ್ರೀವಿದ್ಯಾಕಣ್ವತೀರ್ಥರು



ರಾಯಚೂರು: ಬ್ರಾಹ್ಮಣರು ಸತ್ಯಮೇವ ಜಯತೆ ಎಂಬ ವಾಕ್ಯದಡಿ ನಂಬಿಕೆಯುಳ್ಳವರಾಗಿದ್ದು, ಸತ್ಯವಾದುದನ್ನೇ ನುಡಿಯುತ್ತಾದ್ದರಿಂದಲೇ ನಮ್ಮ ಶ್ರೇಯಸ್ಸು ಎಂದು ಕಣ್ವಮಠಾಧೀಶರಾದ ಶ್ರೀ ವಿದ್ಯಾಕಣ್ವ ವಿರಾಜತೀರ್ಥರು ನುಡಿದರು.

ಅವರು ನಗರದ ಬೋಳಮಾನ ದೊಡ್ಡಿ ರಸ್ತೆಯ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಘಟಕದಿಂದ ಹೊರತರಲಾದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಆಶೀರ್ವಚನ ನೀಡಿದರು.

ಬ್ರಾಹ್ಮಣರು ಎಲ್ಲ ರಂಗದಲ್ಲಿ ಮುಂದಿದ್ದಾರೆ. ಬ್ರಾಹ್ಮಣರಿಗೆ ನಮ್ಮ ಆಚಾರ ವಿಚಾರ ಬಿಡದೆ ಸಮಾಜಕ್ಕೆ ಪರೋಪಕಾರ ಮಾಡುತ್ತ ಸಾಗಬೇಕು, ಅವರು ಸತ್ಯ ನುಡಿಯಬೇಕು. ಸತ್ಯಮೇವ ಜಯತೇ ಎಂಬ ವಾಕ್ಯದಂತೆ ನಮ್ಮೆಲ್ಲರ ನಮ್ಮ ನಡೆ ನುಡಿ ಸತ್ಯದಿಂದ ಕೂಡಿರಬೇಕೆಂದರು.

ವಿವಿಧ ರಂಗದಲ್ಲಿ ಅನೇಕ ಬ್ರಾಹ್ಮಣರು ಸಾಧನೆಗೈದಿದ್ದಾರೆ. ವಿದ್ಯಾದದಾತಿ ವಿನಯಂ ಎಂಬಂತೆ ನಾವು ಸದಾ ವಿನಯಶೀಲರಾಗಿರಬೇಕು. ಅನ್ಯ ಸಮಾಜಗಳಿಗೆ ಮಾದರಿಯಾಗಿರಬೇಕು. ನಮ್ಮ ತಂದೆ ತಾಯಿಯನ್ನು ವೃದ್ಯಾಪದಲ್ಲಿ ವೃದ್ಧಾಶ್ರಮಕ್ಕೆ ಸೇರಿಸದೆ ಅವರ ಪಾಲನೆ, ಪೋಷಣೆಯ ಹೊಣೆ ಹೊತ್ತುಕೊಳ್ಳಬೇಕು. ವೃದ್ಧ ತಂದೆ ತಾಯಿ ಬಗ್ಗೆ ತಾತ್ಸಾರ ಮನೋಭಾವ ಸಲ್ಲದು ಎಂದ ಅವರು ವಿಶಿಷ್ಟ ಸಾಧನೆಗೈದ ಬ್ರಾಹ್ಮಣ ಸಮಾಜದ ಸಾಧಕರಿಗೆ ಸನ್ಮಾನಿಸಿ ಆಶೀರ್ವದಿಸಿದರು.

ಪ್ರಾಸ್ತಾವಿಕವಾಗಿ ಮಹಾಸಭಾದ ಜಿಲ್ಲಾ ಪ್ರಧಾನ ಸಂಚಾಲಕ ಡಿ.ಕೆ. ಮುರಳೀಧರ ಮಾತನಾಡಿ, ಕಳೆದ ಮೂರು ವರ್ಷದಿಂದ ಬ್ರಾಹ್ಮಣ ಸಮಾಜದ ಕ್ಯಾಲೆಂಡರ್ ಸ್ಥಗಿತಗೊಂಡಿತ್ತು. ಅದನ್ನು ಪುನಃ ಪ್ರಾರಂಭಿಸಿದ್ದು, ಕ್ಯಾಲೆಂಡರ್ ಬಿಡುಗಡೆಯಾಗಿದೆ. ಸಮಾಜದಲ್ಲಿ ಒಗ್ಗಟ್ಟು ಮೂಡಿಸಬೇಕು ಮತ್ತು ನಮ್ಮ ಆಚಾರ–ವಿಚಾರ ಪದ್ಧತಿಗಳ ಪಾಲನೆ ಗುರಿಯಾಗಿದೆ ಎಂದರು.

ಬ್ರಾಹ್ಮಣ ಸಮಾಜದ ಶಕ್ತಿ ಬಗ್ಗೆ ಇತರರಿಗೆ ತೋರಿಸಬೇಕೆಂದರು. ನಮ್ಮ ಆಚಾರ ನಡೆ–ನುಡಿ ಶುದ್ಧವಾಗಿರಬೇಕು ಮತ್ತು ರಾಜಕೀಯವಾಗಿ ನಮ್ಮನ್ನು ಎಲ್ಲರೂ ಪರಿಗಣಿಸಬೇಕೆಂದರೆ ನಮ್ಮ ಶಕ್ತಿ, ಒಗ್ಗಟ್ಟಿನಲ್ಲಿ ಬಲವಿದೆ ಎಂಬ ವಾಕ್ಯದಡಿ ಕಾರ್ಯನಿರ್ವಹಿಸಬೇಕೆಂದು, ಅವರು ಬ್ರಾಹ್ಮಣ ಅನಾಥ ವೃದ್ಧರಿಗೆ ವೃದ್ಧಾಶ್ರಮ ತೆರೆಯುವ ಗುರಿ ಹೊಂದಿದ್ದೇವೆ ಎಂದರು.

ಅಖಿಲ ಭಾರತ ಕಣ್ವಪರಿಷತ್ತು ದಕ್ಷಿಣ ಕೇಂದ್ರ ವಲಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್ ಮಾತನಾಡಿ, ವಿಪ್ರರೆಲ್ಲರೂ ಒಗ್ಗೂಡಬೇಕು. ನಮ್ಮಲ್ಲಿರುವ ಭಿನ್ನಾಭಿಪ್ರಾಯ ಬದಿಗೊತ್ತಿ ಸಮಾಜದ ಒಳಿತಿಗೆ ಶ್ರಮಿಸಬೇಕೆಂದರು. ಅವರು ಸಮಾಜದ ಶ್ರೇಯಸ್ಸು ನಮ್ಮ ಗುರಿಯಾಗಿರಬೇಕು. ಈ ನಿಟ್ಟಿನಲ್ಲಿ ಮಹಾಸಭಾದ ಜಿಲ್ಲಾ ಘಟಕ ಕ್ಯಾಲೆಂಡರ್ ಬಿಡುಗಡೆಗೊಳಿಸುವ ಮೂಲಕ ಸಮಾಜವನ್ನು ಸಂಘಟಿಸುವ ಕಾರ್ಯ ಮಾಡುತ್ತಿರುವುದು ಸ್ವಾಗತಾರ್ಹ ಕಾರ್ಯವೆಂದರು.

ಶ್ರೀಗಳಿಂದ ಸನ್ಮಾನಿತರಾಗಿ ಮಾತನಾಡಿದ ಡಾ.ಕೆ.ಎಸ್. ರವಿರಾಜನ್ ಬ್ರಾಹ್ಮಣರು ಸ್ವಾವಲಂಬಿಗಳು ಇತರರ ಬಳಿ ಕೈಒಡ್ಡುವುದಿಲ್ಲ. ಆದರೆ ನಮ್ಮಲ್ಲಿರುವ ಬಡವರ ಬಗ್ಗೆ ನಮಗೆ ಕಾಳಜಿಯಿರಬೇಕು, ಬ್ರಾಹ್ಮಣ ಸಮಾಜದಿಂದ ವೃದ್ಧಾಶ್ರಮ ತೆರೆಯಬೇಕೆಂದು ಕೋರಿದ ಅವರು ಅದಕ್ಕೆ ಸಹಾಯ ಸಹಕಾರ ನೀಡುತ್ತೇನೆಂದರು.

ವೇದಿಕೆಯ ಮೇಲೆ ರಾಜ್ಯ ಹಿರಿಯ ಪರಿಷತ್ ಸದಸ್ಯರಾದ ನರಸಿಂಗರಾವ್ ದೇಶಪಾಂಡೆ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಅರವಿಂದ ಕುಲಕರ್ಣಿ, ಪ್ರಾಣೇಶ ಮುತಾಲಿಕ, ರಾಘವೇಂದ್ರ ಚೂಡಾಮಣಿ, ನಗರ ಸಂಚಾಲಕ ವೇಣುಗೋಪಾಲ ಇನಾಂದಾರ್, ಗ್ರಾಮೀಣ ಸಂಚಾಲಕ ಜಿ. ಶಾಮಾಚಾರ್, ರಾಜ್ಯ ಯುವ ಘಟಕದ ಹನುಮೇಶ್ ಸರಾಫ್, ಜಿಲ್ಲಾ ಮಹಿಳಾ ಘಟಕದ ಡಿ.ಕೆ. ರೇಖಾ, ಲಿಂಗಸೂರು ಘಟಕದ ಸಂಚಾಲಕ ಪ್ರಾಣೇಶ ಜೋಷಿ, ಮಾನ್ವಿ ಘಟಕದ ಸಂಚಾಲಕ ಮುದ್ದುರಂಗರಾವ್ ಮುತಾಲಿಕ್, ಜಿಲ್ಲಾ ಯುವ ಘಟಕದ ಸಂಚಾಲಕ ಪ್ರಹ್ಲಾದ ಕುಲಕರ್ಣಿ, ಇನ್ನಿತರರು ಇದ್ದರು.

ಡಾ. ಕೆ.ಎಸ್. ರವಿರಾಜನ್, ಡಾ. ಸಿ.ಎನ್. ಕುಲಕರ್ಣಿ, ಶೋಭಾ ಪ್ರಮೋದ ಕಟ್ಟಿ, ವರದರಾಜ ಕುಲಕರ್ಣಿ, ಕೆ.ಸಿ. ವಾಸುದೇವರಾವ್ ಧಣಿ ಅವರನ್ನು ಸನ್ಮಾನಿಸಲಾಯಿತು.

ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ. ಆನಂದತೀರ್ಥ ಫಡ್ನೀಸ್ ಸ್ವಾಗತಿಸಿದರು. ವೆಂಕಟೇಶ ನವಲಿ ಮತ್ತು ಪಾಂಡುರಂಗ ಕುರ್ಡಿಕರ್ ನಿರೂಪಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಭಾಗವಹಿಸಿದ್ದರು.

## ರಾಯಚೂರಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವ ಘಟಕ ರಾಯಚೂರು ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಶ್ರೀ ರಾಘವೇಂದ್ರ ವಿದ್ಯಾರ್ಥಿ ನಿಲಯ, ಅಖಿಲ ಭಾರತ ಮಾಧ್ವ ಮಂಡಲ, ಜವಾಹರ ನಗರದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಬ್ರಾಹ್ಮಣ ಸಮಾಜದ ಹಿರಿಯರು ಹಾಗೂ ಮಾಧ್ವ ಮಂಡಲದ ಗೌರವಾಧ್ಯಕ್ಷರಾದ ಶ್ರೀ ನರಸಿಂಗ್‌ರಾವ್ ದೇಶಪಾಂಡೆ ರವರು ದೀಪ ಪ್ರಜ್ವಲಿಸಿ ಹಾಗೂ ವಿವೇಕಾನಂದರ ಭಾವಚಿತ್ರ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು,

ಈ ಸಂದರ್ಭದಲ್ಲಿ ವೇದಿಕೆ ಮೇಲೆ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ವಿಭಾಗದ ವ್ಯವಸ್ಥಾ ಪ್ರಮುಖರಾದ ಶ್ರೀ ಎ.ನಾಗರಾಜ ಜೀ, ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಡಾ.ಆನಂದ ಫಡ್ನವೀಸ್, ಬ್ರಾಹ್ಮಣ ಮಹಾಸಭಾ ರಾಜ್ಯ ಯುವ ಘಟಕದ ಸಹ ಸಂಚಾಲಕ ಹನುಮೇಶ ಸರಾಫ, ರಾಯಚೂರು ಜಿಲ್ಲಾ ಸಂಚಾಲಕರಾದ ಡಿ.ಕೆ.ಮುರಳೀಧರ, ಹಾಗೂ ಯುವ ಘಟಕದ ಜಿಲ್ಲಾ ಸಂಚಾಲಕ ಪ್ರಹ್ಲಾದ ಕುಲಕರ್ಣಿ ಉಪಸ್ಥಿತರಿದ್ದರು

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಡಾ.ಆನಂದ ಫಡ್ನವೀಸ್ ಮಾತನಾಡಿದರು. ವಿವೇಕಾನಂದರ ಜೀವನ ಚರಿತ್ರೆ ಕುರಿತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಳ್ಳಾರಿ ವಿಭಾಗದ ವ್ಯವಸ್ಥಾಪಕ ಪ್ರಮುಖರಾದ ಶ್ರೀ ಎ. ನಾಗರಾಜಜೀರವರು ಸವಿಸ್ತಾರವಾಗಿ ಉಪನ್ಯಾಸ ನೀಡಿದರು, ನಂತರದಲ್ಲಿ ಮುಖ್ಯ ಉಪನ್ಯಾಸ ನೀಡಿದ ಶ್ರೀ ಎ. ನಾಗರಾಜ ಜೀ ರವರಿಗೆ ಯವ ಘಟಕದ ವತಿಯಿಂದ ಗಾಯಿತ್ರಿ ದೇವಿ ಫೋಟೊ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಜಿಲ್ಲಾ ಬ್ರಾಹ್ಮಣ ಮಹಾಸಭಾ ಸಂಚಾಲಕರಾದ ಡಿ.ಕೆ.ಮುರಳೀಧರ ರವರು ಮಾತನಾಡಿದರು.

ಸ್ವಾಗತ ಭಾಷಣ ಹಾಗೂ ವಂದನಾರ್ಪಣೆಯನ್ನು ರಾಜ್ಯ ಯುವ ಘಟಕದ ಕಾರ್ಯಕಾರಿಣಿ ಸದಸ್ಯ ವಿನೋದ ಸಗರ ಪ್ರಾರ್ಥನಾ ಗೀತೆಯನ್ನು ಸಂಕರ್ಷಣ ಜೋಶಿ, ನಿರೂಪಣೆಯನ್ನು ಶ್ರೀಷಾ ರಾಯಚೂರು ಮಾಡಿದರು, ಕಾರ್ಯಕ್ರಮದಲ್ಲಿ ಸಮಾಜದ ಹಿರಿಯರು, ಮಹಿಳೆಯರು, ಹಾಗೂ ಯುವಕರು ಭಾಗವಹಿಸಿದ್ದರು.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

## ಅರಸೀಕೆರೆಯಲ್ಲಿ ವಿಪ್ರ ನೌಕರರ ದಶಮಾನೋತ್ಸವ ಸಮಾರಂಭ

# ಸ್ಪರ್ಧಾತ್ಮಕ ಪರೀಕ್ಷೆ ಸವಾಲಾಗಿ ಸ್ವೀಕರಿಸಿ

–ಅಶೋಕ ಹಾರನಹಳ್ಳಿ



**ಹಾಸನ ಜಿಲ್ಲೆ ಅರಸೀಕೆರೆಯಲ್ಲಿ ವಿಪ್ರ ನೌಕರರ ಸಂಘದ ದಶಮಾನೋತ್ಸವದ ಸಮಾರಂಭವನ್ನು ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಉದ್ಘಾಟಿಸಿದರು. ಹಿರೇಮಗಳೂರು ಕಣ್ಣನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.**

ಅರಸೀಕೆರೆ: ಸರ್ಕಾರಿ ವ್ಯವಸ್ಥೆಯಲ್ಲಿ ಇನ್ನು ಮುಂದೆ ಬ್ರಾಹ್ಮಣ ಸಂಖ್ಯೆ ಕ್ಷೀಣಿಸುತ್ತಿದೆ. ಆದರೆ ಇದಕ್ಕೆ ಹೆದರದೆ ಈ ಕ್ಲಿಷ್ಟ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಕೇಂದ್ರ ಸರ್ಕಾರದ ಐಎಎಸ್, ಐಪಿಎಸ್ ಪರೀಕ್ಷೆಗಳನ್ನು ಸವಾಲಾಗಿ ಸ್ವೀಕರಿಸಿ ದೇಶದ ಆಡಳಿತ ಯಂತ್ರದಲ್ಲಿ ಬ್ರಾಹ್ಮಣ ಯುವಕರು ಭಾಗಿಯಾಗಬೇಕಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಅವರು ಕಿವಿಮಾತನ್ನು ಹೇಳಿದರು.

ಅರಸೀಕೆರೆ ನಗರದ ಹಾರನಹಳ್ಳಿ ರಾಮಸ್ವಾಮಿ ಸಭಾ ಭವನದಲ್ಲಿ ನಡೆದ ವಿಪ್ರ ನೌಕರರ ಬಳಗದ ದಶಮಾನೋತ್ಸವವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ವಾತಾವರಣ ಕಲುಷಿತವಾಗುತ್ತಿದೆ. ಇದರಲ್ಲಿ ಶಿಕ್ಷಣ ಸಂಸ್ಥೆಗಳು ಹೊರತಾಗಿಲ್ಲ. ವಿಪ್ರ ನೌಕರರ ಕೆಲಸ ಮಾಡುವ ಸ್ಥಳದಲ್ಲಿ ಬೇರೊಬ್ಬರನ್ನು ಅನುಕರಣೆ ಮಾಡದೆ ತಮ್ಮ ದಾರಿ ತಿಳಿಯದ ಸರಿಯಾದ ಮಾರ್ಗದಲ್ಲಿ ನಡೆಯಬೇಕೆಂದ ಅವರು ವಿಪ್ರ ಸಮಾಜವು ಜನ್ಮಜನ್ಮಾಂತರದಲ್ಲಿ ನಂಬಿಕೆ ಇಟ್ಟಿದೆ. ಈ ಜನ್ಮದಲ್ಲಿನ ಆಮಿಷ, ಅಧಿಕಾರ ದುರಪಯೋಗ ಪಾಪಗಳು ಲಂಚಕ್ಕೆ ಒಳಗಾದರೆ ಇವತ್ತಿನ ಜೊತೆ ನಾಳೆಯ ಪಾಪ ಶೇಷವನ್ನು ಅನುಭವಿಸಬೇಕಾಗುತ್ತದೆ ಎಂಬ ಪರಿಜ್ಞಾನ ದಿಂದ ಸನ್ಮಾರ್ಗದಲ್ಲಿ ಸಾಗಬೇಕೆಂದರು.

ನಮ್ಮ ಸಂತೋಷಕ್ಕಿಂತ ಇನ್ನೊಬ್ಬರ ಸಂತೋಷಕ್ಕೆ ಹೊಣೆಗಾರರಾದರೆ ಆಗಮಾತ್ರ ನಮಗೂ ಸಂತೋಷದ ಸೌಭಾಗ್ಯವನ್ನು ಪಡೆಯಲು ಸಾಧ್ಯವೆಂದರು. ಸರ್ಕಾರಿ ಮತ್ತು ಖಾಸಗಿ ವ್ಯವಸ್ಥೆಯಲ್ಲಿ ಸೇರ್ಪಡೆಯಾದ ವಿಪ್ರರು ತಮ್ಮ ಸುತ್ತಮುತ್ತಲಿನಲ್ಲಿ ಆದರ್ಶಪ್ರಾಯರಾಗಿ ಯಾವುದೇ ಆಮಿಷ ಮತ್ತು ಅನುಕರಣೆಗೆ ಒಳಗಾಗದೆ ತಮ್ಮ ಕಾರ್ಯಕ್ಷೇತ್ರದಲ್ಲಿ ಶ್ರೇಯಸ್ಸು ಗಳಿಸಿ ಎಂದು ಅಶೋಕ ಹಾರನಹಳ್ಳಿ ನುಡಿದರು. ಚಿಂತಕ ಹಾಗೂ ಕನ್ನಡ ಪೂಜಾರಿ ಹಿರೇಮಗಳೂರು ಕಣ್ಣನ್ ಸಮಾಜದಲ್ಲಿನ ಇಂದಿನ ವಿದೇಶಿ ಅನುಕರಣೆ ಹಾಗೂ ಮೊಬೈಲ್ ಸಂಸ್ಕೃತಿಯು ಸಮಾಜದಲ್ಲಿ ಮಾರಕ ವಾಗಿದೆ ಎಂಬ ಬಗ್ಗೆ ಮಾತನಾಡಿದರು. ಅಧ್ಯಕ್ಷತೆಯನ್ನು ಅರಸೀಕೆರೆ ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷ ಕೆ. ರಮೇಶ್ ವಹಿಸಿದ್ದರು.

ದಶಮಾನೋತ್ಸವದ ನಿಮಿತ್ತ ವಿದ್ಯಾರ್ಥಿಗಳಿ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ರೀಡೆಯಲ್ಲಿ ಜಯಗಳಿಸಿದವರಿಗೆ ಬಹುಮಾನ ವಿತರಿಸಲಾಯಿತು. ವಿಪ್ರ ನೌಕರರ ಬಳಗದ ಸ್ಥಾಪಿತ ಅಧ್ಯಕ್ಷರಾದ ಡಾ.ಶೈಲಜಾ ಪಾಂಡುರಂಗ, ಗರುಡನಗಿರಿ ಕೃಷ್ಣಮೂರ್ತಿಯವರನ್ನು ಸನ್ಮಾನಿಸಲಾಯಿತು. ವಿಪ್ರ ನೌಕರರ ಬಳಗದ ಕಾರ್ಯದರ್ಶಿ ಶ್ರೀಮತಿ ಕಾಮಾಕ್ಷಿ ಭಟ್ ಸ್ವಾಗತಿಸಿದರು. ಬಳಗದ ಅಧ್ಯಕ್ಷ ಮೋಹನ್ ಸಂಘ ನಡೆದುಬಂದ ಹಾದಿಯ ಬಗ್ಗೆ ಮಾತನಾಡಿದರು. ಕಲ್ಯಾಡಿ ಅಶೋಕ್ ನಿರೂಪಿಸಿದರೆ, ಖಜಾಂಚಿ ನಾಗೇಶ್ ವಂದಿಸಿದರು.



## ಪದಾಧಿಕಾರಿಗಳು ಹಾಗೂ ಕಾರ್ಯಕಾರಿಣಿ ಸಮಿತಿಯ ವಿಶೇಷ ಸಭೆ

ಇಂದು ಮಹಾಸಭಾ ಕಾರ್ಯಕಾರಿ ಸದಸ್ಯರು ಪದಾಧಿಕಾರಿಗಳು, ವಿವಿಧ ಘಟಕಗಳ ಸಂಚಾಲಕರ ಸುದೀರ್ಘ ಸಭೆ ಮಹಾ ಸಭಾ ಕಚೇರಿ ಗಾಯತ್ರಿ ಭವನದಲ್ಲಿ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ ಆರ್ಥಿಕವಾಗಿ ದುರ್ಬಲರಾದ ಮುಂದುವರಿದ ಸಮುದಾಯಕ್ಕೆ ಕೇಂದ್ರ ಸರ್ಕಾರ ನೀಡಿದ ಮೀಸಲಾತಿಯನ್ನು ಕಡಿತಗೊಳಿಸಿದ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸುವ ಕುರಿತು ಜನಾಭಿಪ್ರಾಯ ಜಾಗೃತಿಗೊಳಿಸಲು ಕೈಗೊಳ್ಳಬೇಕಾದ ಮುಂದಿನ ಕಾರ್ಯಯೋಜನೆಗಳ ಬಗ್ಗೆ ಚರ್ಚಿಸಲಾಯಿತು.

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಚಿತ್ರ ಸಹಿತ
ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು. ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ–ಮೇಲ್ : e mail : vipranudi@gmail.com
**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

# ಡಾ॥ ವೇ॥ಬ್ರ॥ ಶ್ರೀ ಸುಬ್ಬರಾಯ ಶರ್ಮರಿಗೆ 75ನೇ ವರ್ಧಂತಿ ಮಹೋತ್ಸವ






ವಿದ್ವಾನ್ ಡಾ॥ ಕೆ.ಜಿ. ಸುಬ್ರಾಯ ಶರ್ಮ ಅವರ 75ನೇ ವರ್ಷದ ಶುಭ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ **"ವೇದ ವಿದ್ಯಾನಿಧಿ ಪ್ರಶಸ್ತಿ"** ಯನ್ನು 21ನೇ ಡಿಸೆಂಬರ್ 2023ರಂದು ಬೆಂಗಳೂರಿನಲ್ಲಿ ನೀಡಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಅದ್ವೈತ ವಾಚಸ್ಪತಿ ಶ್ರೀ ಪಾವಗಡಪ್ರಕಾಶ್ ರಾವ್ ಅವರು ವಹಿಸಿದ್ದರು. ಬಬ್ಬೂರಕಮ್ಮೆ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಡಾ॥ ಎ.ವಿ. ಪ್ರಸನ್ನ ಮತ್ತು ವಿಖ್ಯಾತ ವಾಗ್ಮಿಗಳಾದ ಶ್ರೀ ಚಕ್ರವರ್ತಿ ಸೂಲಿಬೆಲೆ ಅವರೂ ಭಾಗವಹಿಸಿದ್ದರು.

## ಭಾಷೆ ಉಳಿವಿಗೆ ಸುಗ್ರೀವಾಜ್ಞೆ ತರಲಿ

**–ಅಶೋಕ ಹಾರನಹಳ್ಳಿ**




ಕನ್ನಡ ಭಾಷೆಯನ್ನು ಅಧಿಕೃತವಾಗಿ ಎಲ್ಲ ಹಂತದಲ್ಲೂ ಅನುಷ್ಠಾನ ಗೊಳಿಸುವ ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕವನ್ನು ಮುಖ್ಯಮಂತ್ರಿ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿಯೇ ಕಾನೂನಾಗಿ ಜಾರಿಗೆ ತರಬೇಕಿತ್ತು. ಕನ್ನಡದ ಉಳಿವಿಗಾಗಿ ಸುಗ್ರೀವಾಜ್ಞೆ ಮೂಲಕವಾದರೂ ತಕ್ಷಣ ಜಾರಿಗೆ ತರಲಿ' ಎಂದು ವಕೀಲ ಅಶೋಕ ಹಾರನಹಳ್ಳಿ ಆಗ್ರಹಿಸಿದರು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 'ಕನ್ನಡಪರ ಮತ್ತು ಪ್ರಗತಿಪರ ವರದಿಗಳ ಅನುಷ್ಠಾನ'ದ ಕುರಿತು ನಡೆದ ಗೋಷ್ಠಿಯ 'ಕನ್ನಡ ಸಮಗ್ರ ಭಾಷಾ ಅಭಿವೃದ್ಧಿ ವಿಧೇಯಕ ಮತ್ತು ಕಾನೂನು' ಕುರಿತು ವಿಷಯ ಮಂಡಿಸಿ ಮಾತನಾಡಿದರು. 'ಮುಖ್ಯಮಂತ್ರಿಯವರು ಸಾರ್ವಜನಿಕ ಸಭೆಗಳಲ್ಲಿ, ಮಾಧ್ಯಮಗಳಲ್ಲಿ ಕಾನೂನು ಜಾರಿಗೆ ತರುತ್ತೇನೆ ಎಂದು ಹೇಳಿಕೆ ನೀಡುವುದು ಸರಿಯಲ್ಲ. ಅವಕಾಶ ದೊರೆತಾಗ ಮಾಡಿಬಿಡಬೇಕಿತ್ತು. ಒಂದೆರಡು ತಿಂಗಳಲ್ಲಿ ಅವರ ಅಧಿಕಾರ ಸಹ ಮುಕ್ತಾಯವಾಗಲಿದೆ' ಎಂದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಾತೃಭಾಷೆಗೆ ಪ್ರಾಮುಖ್ಯ ನೀಡಲಾಗಿದೆ. ಆದರೆ, ನ್ಯಾಯಾಲಯವು ಪಾಲಕರಿಗೆ ಭಾಷಾ ಸ್ವಾತಂತ್ರ್ಯ ನೀಡಿದ್ದು, ಅತಿರೇಕದ ನಿರ್ಣಯ. ಇದು ಕನ್ನಡ ಭಾಷೆ ಬೆಳವಣಿಗೆಗೆ ದೊಡ್ಡ ಹಿನ್ನಡೆಯಾಗಿದೆ' ಎಂದು ಅಭಿಪ್ರಾಯಪಟ್ಟರು.

'ಹಾವನೂರು ವರದಿಗೆ ಐವತ್ತು ವರ್ಷ' ವಿಷಯದ ಕುರಿತು ಮಾತನಾಡಿದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ, ಹಿಂದುಳಿದ ವರ್ಗದವರ ಪಾಲಿಗೆ ಹಾವನೂರು ವರದಿ ಬೈಬಲ್ ಇದ್ದಂತೆ. ಅದರ ಪರಿಣಾಮ ಹಿಂದುಳಿದ ವರ್ಗದವರು ಶಿಕ್ಷಣ, ಉದ್ಯೋಗ ಪಡೆದು ಸಮಾಜಮುಖಿಯತ್ತ ಸಾಗುತ್ತಿದ್ದಾರೆ' ಎಂದರು.

### ವಿಪ್ರನುಡಿಗೆ ಚಂದಾದಾರರಾಗಲು ಮನವಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡ ಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.**

# ಕನ್ನಡ ಶಂಕರರ 142ನೇ ಜಯಂತೀ ಕಾರ್ಯಕ್ರಮ




ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿರುವ "ಅಧ್ಯಾತ್ಮ ಪ್ರಕಾಶ ಕಾರ್ಯಾಲಯ" ಧಾರ್ಮಿಕ ವೇದಾಂತ ಸಂಸ್ಥೆಯ ಸಂಸ್ಥಾಪಕರಾದ ಶ್ರೋತ್ರಿಯರೂ, ಬ್ರಹ್ಮನಿಷ್ಠರೂ ಆಗಿರುವ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳ 142ನೇ ವರ್ಷದ ಜಯಂತೀ ಕಾರ್ಯಕ್ರಮವನ್ನು ಸಾಕಮ್ಮ ಗಾರ್ಡೆನ್ಸ್ ನಲ್ಲಿರುವ ವೇದಾಂತ ನಿಲಯ ದಲ್ಲಿ ಏರ್ಪಡಿಸಲಾಗಿತ್ತು. ಶ್ರೀ ಶ್ರೀಗಳವರು 05–01–1880 ರಂದು ಜನಿಸಿದರು.

ಇವರು ಪೂರ್ವಾಶ್ರಮದಲ್ಲಿ ಅಧ್ಯಾಪಕರಾಗಿ ಜೀವನ ನಡೆಸುತ್ತಾ ಅಂದಿನಿಂದಲೇ ವೇದಾಂತದಲ್ಲಿ ಆಸಕ್ತಿ ಉಳ್ಳವರಾಗಿ ವೇದಾಂತ ಗ್ರಂಥಗಳ ಅಧ್ಯಯನ ಅಧ್ಯಾಪನಗಳನ್ನು ಮಾಡುತ್ತಾ ಸುಮಾರು 250 ಗ್ರಂಥಗಳನ್ನು ಸಂಸ್ಕೃತ, ಕನ್ನಡ, ಆಂಗ್ಲ ಭಾಷೆಗಳಲ್ಲಿ ರಚಿಸಿದ್ದಾರೆ. ಅಖಂಡ ಭಾರತದಲ್ಲಿ ಸಂಚಾರ ಮಾಡಿ ಶ್ರೀ ಶಂಕರರ ಸಿದ್ಧಾಂತಗಳನ್ನು ಪ್ರಚಾರ ಮಾಡಿದ್ದಾರೆ. ಇವರು ಶ್ರೀ ಶಂಕರರ ಪ್ರಸ್ಥಾನತ್ರಯ ಭಾಷ್ಯಗಳನ್ನೂ, ಇತರ ಪ್ರಕರಣ ಗ್ರಂಥಗಳನ್ನೂ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಕನ್ನಡ ಶಂಕರರೆಂದೇ ಪ್ರಖ್ಯಾತರಾಗಿದ್ದಾರೆ, 20ನೇ ಶತಮಾನದ ಅಭಿನವ ಶಂಕರರೆಂದೇ ಪ್ರಸಿದ್ಧರಾಗಿರುವ ಈ ಮಹಾತ್ಮರ ಸಾಕ್ಷಾತ್ ಶಿಷ್ಯರೂ ಅಂತ್ಯವಾಸಿ ಶಿಷ್ಯರೂ ಆಗಿರುವ ಮಹಾಮಹೋಪಾಧ್ಯಾಯ ವಿದ್ವಾನ್ ಕೆ.ಜಿ ಸುಬ್ರಾಯ ಶರ್ಮಾರವರು ಪ್ರತಿದಿನ ವೇದಾಂತ ಉಪನ್ಯಾಸಗಳನ್ನು ಮಾಡುತ್ತಾ, ಅನೇಕ ಸರಳ ಏಕಪುಟ ಗ್ರಂಥಗಳನ್ನು ರಚಿಸುತ್ತಾ ವೇದಾಂತ ಪ್ರಸಾರವನ್ನು ಮಾಡುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ, ಮಾರ್ಗಶಿರ ಮಾಸ ಕೃಷ್ಣಪಕ್ಷ ಅಷ್ಟಮೀ ತಿಥಿ ಶುಕ್ರವಾರದಂದು ಬೆಳಗ್ಗೆ 9:00 ರಿಂದ 10:30ರ ವರೆಗೆ ವೇದಾಂತ ನಿಲಯ ಸಾಕಮ್ಮ ಗಾರ್ಡನ್ಸ್ ನಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಮಹಾಸ್ವಾಮಿಗಳ 142 ನೇ ಜಯಂತೀ ಪ್ರಯುಕ್ತ ಶ್ರೀ ಶ್ರೀಗಳವರ ಗುಣಗಾನ, ಶ್ರೀ ಶ್ರೀಗಳ ಮಹಿಮೆ, ಪಾದಪೂಜೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

# ರಾಷ್ಟ್ರಪತಿ ಪೋಲೀಸ್ ಪದಕ ಪ್ರದಾನ



ಶ್ರೀ. ಬಿ.ಎ. ಲಕ್ಷ್ಮೀನಾರಾಯಣ ರವರು ಮಹಾಸಭೆಯ ಸದಸ್ಯರು ಹಾಗೂ ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದ ಸದಸ್ಯರು. ಇವರು ಮಹಾಸಭೆಯ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಮತಿ. ಬಿ.ಎ. ಶಶಿಕಲಾ ರವರ ಜ್ಯೇಷ್ಠ ಸಹೋದರರು.

ಶ್ರೀಯುತರು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯಲ್ಲಿ ಪಿ.ಎಸ್.ಐ.ಆಗಿ 41 ವರ್ಷ ಸೇವೆ ಸಲ್ಲಿಸಿದ್ದಾರೆ.

ಕೇಂದ್ರ ಸರ್ಕಾರವು ಇವರ ಸೇವೆಯನ್ನು ಗುರುತಿಸಿ, ಇವರಿಗೆ 'ಸಾರ್ಥಕ ಸೇವೆಗಾಗಿ' 2020ನೇ ಸಾಲಿನ ರಾಷ್ಟ್ರಪತಿ ಪೊಲೀಸ್ ಪದಕವನ್ನು ನೀಡಿ ಗೌರವಿಸಲಾಯಿತು.

ಈ ಪದಕವನ್ನು ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ದಿನಾಂಕ 11.12.22ರಂದು ಬೆಂಗಳೂರಿನ ರಾಜಭವನದ ಗಾಜಿನ ಮನೆಯಲ್ಲಿ ನೀಡಿರುತ್ತಾರೆ. ಈ ಸಂದರ್ಭದಲ್ಲಿ ರಾಜ್ಯದ ಗೃಹಮಂತ್ರಿಗಳಾದ ಶ್ರೀ ಅರಗ ಜ್ಞಾನೇಂದ್ರರವರು ಉಪಸ್ಥಿತರಿದ್ದರು.

**ಮಾನ್ಯ ಸದಸ್ಯರಲ್ಲಿ ವಿನಂತಿ:**

**ಮಹಾಸಭೆಯ ಸದಸ್ಯರ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಆಜೀವ/ದಾನಿ/ ಅಂಗಸಂಸ್ಥೆ ಸದಸ್ಯರ ವಿಳಾಸಗಳು ಬದಲಾವಣೆ ಆಗಿರುವಲ್ಲಿ ತಮ್ಮ ಸದಸ್ಯತ್ವ ಸಂಖ್ಯೆಯೊಂದಿಗೆ, ಇತ್ತೀಚಿನ ವಿಳಾಸ ಹಾಗೂ ಮೊಬೈಲ್ ಸಂಖ್ಯೆಗಳನ್ನು ಹಾಗೂ ಹಿರಿಯ ಸದಸ್ಯರು ದೈವಾಧೀನರಾಗಿರುವ ಸಂದರ್ಭದಲ್ಲಿ ಅವರ ಮಾಹಿತಿಗಳನ್ನು ಮಹಾಸಭೆಗೆ ಕಳುಹಿಸಿಕೊಟ್ಟರೆ ಸದಸ್ಯತ್ವ ಪಟ್ಟಿಯನ್ನು ಪರಿಷ್ಕರಿಸಲು ಬಹಳ ಸಹಾಯವಾಗುತ್ತದೆ. ಸದರಿ ಕಾರ್ಯಕ್ರಮಕ್ಕೆ ತಮ್ಮ ಸಹಕಾರ ಕೋರಿದೆ.**

# ಬಳ್ಳಾರಿಯಲ್ಲಿ ಸಂಘಟನಾ ಸಭೆ



ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗ ದರ್ಶನದಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಘಟನಾ ಸಭೆಯು ಬಳ್ಳಾರಿಯ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬಳ್ಳಾರಿ ಜಿಲ್ಲಾ ಪ್ರಮುಖರಾದ ಶ್ರೀ ಸೂರ್ಯನಾರಾಯಣ ಶಾಸ್ತ್ರಿಗಳು ಮತ್ತು ಶ್ರೀ ಗೋವಿಂದ ಭಟ್ಟರ ನೇತೃತ್ವದಲ್ಲಿ ನೆರವೇರಿತು.

ಬಳ್ಳಾರಿ ಜಿಲ್ಲೆಯಲ್ಲಿ ಬ್ರಾಹ್ಮಣ ಸಂಘಟನೆಯ ಮಹತ್ವವನ್ನು ಕುರಿತು ಸಂಘಟನಾ ಕಾರ್ಯದರ್ಶಿ ಶ್ರೀ ರಾಘವೇಂದ್ರ ಭಟ್ಟರು, ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರು ಸಭೆಗೆ ವಿವರಿಸಿದರು.

ಈ ಸಭೆಯಲ್ಲಿ ಕೇಂದ್ರ ಕಾರ್ಯಕಾರಿಣಿ ಸಮಿತಿ ಸದಸ್ಯರುಗಳಾದ ಶ್ರೀ ಉಮೇಶ ಶಾಸ್ತ್ರಿ, ಶ್ರೀನಿವಾಸ್, ಬಳ್ಳಾರಿ ಜಿಲ್ಲಾ ಬ್ರಾಹ್ಮಣ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪ್ರಕಾಶ್ ಮತ್ತು ಇನ್ನಿತರ ಜಿಲ್ಲಾ ಪ್ರಮುಖ ಬ್ರಾಹ್ಮಣ ಮುಖಂಡರುಗಳು ಭಾಗವಹಿಸಿದ್ದರು.

21-12-2022ರ ಬುಧವಾರದಂದು ಸಾಯಂಕಾಲ 5:30 ಗಂಟೆಗೆ ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಮಹಾಸಭಾ ರಾಯಚೂರು ಘಟಕದ ವತಿಯಿಂದ ನೂತನ 2023ನ ಕ್ಯಾಲೆಂಡರ್ ಬಿಡುಗಡೆಯ ಸಮಾರಂಭ ವನ್ನು ಶ್ರೀ ಶ್ರೀ 1008 ಶ್ರೀ ವಿದ್ಯಾ ಕಣ್ವ ವಿರಾಜ ತೀರ್ಥ ಶ್ರೀಪಾದಂಗಳವರ ಅಮೃತ ಹಸ್ತದಿಂದ ಕ್ಯಾಲೆಂಡರ ಬಿಡುಗಡೆ ಸಮಾರಂಭವನ್ನು ಹಮ್ಮಿ ಕೊಳ್ಳಲಾಗಿತ್ತು. ಹಿರಿಯ ಸಾಧಕರಾದ ಡಾ॥ ರವಿರಾಜನ್, ಡಾ॥ ಸಿಎನ್ ಕುಲಕರ್ಣಿ, ಶ್ರೀ ವರದರಾಜ್ ಕುಲಕರಣಿ ವಂದಾಲಿ, ಶ್ರೀಮತಿ ಶೋಭಾ ಪ್ರಮೋದ್ ಕಟ್ಟಿ ಹಾಗೂ ಕುಮಾರ್ ಕೆ ಪಿ ವಾಸುದೇವರ ಧಣಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಮತ್ತು ಸೇತು ಮಾಧವ ಕೆರೂರ್ ಹಾಗೂ ಸಂಗಡಿಗರಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು.

## ಮಹಾಸಭಾ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಸಭೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಮಹೇಶ್ ಕಜೆ ಅವರ ನೇತೃತ್ವದಲ್ಲಿ ಮಹಾಸಭಾ ದಕ್ಷಿಣ ಕನ್ನಡ ಜಿಲ್ಲೆಯ ಕಚೇರಿಯಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಕಶಕುಡಿ ಸೂರ್ಯನಾರಾಯಣ ಭಟ್ ಶ್ರೀ ಗಿರಿ ಪ್ರಕಾಶ್ ತಂತ್ರಿ ಹಾಗೂ ಹರಿಪ್ರಸಾದ್ ಪೆರಿಯಾಪು ಶ್ರೀಮತಿ ಚೇತನ ದತ್ತಾತ್ರೇಯ. ಶ್ರೀಮತಿ ಉಮಾ ಸೋಮಯಾಜಿ ಹಾಗೂ ಅನೇಕ ಗಣ್ಯ ವ್ಯಕ್ತಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಜನವರಿ 22ರಂದು ನಡೆಯಲಿರುವ ದಕ್ಷಿಣ ಕನ್ನಡ ಘಟಕದ ಯುವ ಘಟಕ ಹಾಗೂ ಮಹಿಳಾ ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ನಮ್ಮವರು ನಮ್ಮ ಹೆಮ್ಮೆ ಕಾರ್ಯಕ್ರಮ ಆಯೋಜಿಸುವ ಕುರಿತು ಸಮಾಲೋಚನೆ ನಡೆಸಲಾಯಿತು.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**
**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**
**ಸ್ಥಳ : ಗಾಯತ್ರಿ ಭವನ**
ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**
ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

## ವಿಪ್ರ ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇಷನ್ (ರಿ.)
## ವಲಯವಾರು ಪದಾಧಿಕಾರಿಗಳ ಆಯ್ಕೆ






ದಿನಾಂಕ 26.12.2022ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಹಸಂಸ್ಥೆಯಾದ ಕರ್ನಾಟಕ ರಾಜ್ಯ ವಿಪ್ರ ಫೋಟೋ ಮತ್ತು ವಿಡಿಯೋಗ್ರಾಫರ್ಸ್ ಅಸೋಸಿಯೇಷನ್ (ರಿ.) ವಲಯವಾರು ಸಮಿತಿಯ ಆಯ್ಕೆಯುಪ್ರಕ್ರಿಯೆ ಸಲುವಾಗಿ ಕಲಬುರ್ಗಿಯಲ್ಲಿ ಶ್ರೀ ಎಂ.ಎನ್.ಎಸ್.ಶಾಸ್ತ್ರೀ (ಚಂದನ ಸ್ಟುಡಿಯೋ) ಮಾಲೀಕರು ಅಲ್ಲಿಯ ವೃತ್ತಿಬಾಂಧವರನ್ನು ಒಟ್ಟುಗೂಡಿಸಿ ಸರಿ ಸುಮಾರು 30 ಜನರ ತಂಡದ ಸಮ್ಮುಖದಲ್ಲಿ ವೃತ್ತಿನಿರತ ಛಾಯಾಗ್ರಾಹಕರ ಸಭೆ ನಡೆಯಿತು. ಸಭೆಯಲ್ಲಿ ಸಂಸ್ಥೆಯು ಆಡಳಿತಾತ್ಮಕ ಅನುಕೂಲತೆಗಾಗಿ ಬೀದರ್, ಯಾದಗಿರಿ ಹಾಗೂ ಕಲಬುರ್ಗಿ ಜಿಲ್ಲೆಗಳನ್ನು ಕಲಬುರ್ಗಿ ವಲಯ ಎಂದು ಪರಿಗಣಿಸಲು ಸಭೆ ತೀರ್ಮಾನಿಸಿತು. ಶ್ರೀ ರಾಘವೇಂದ್ರ ಬುರ್ಲಿ ಅವರನ್ನು ವಲಯದ ಅಧ್ಯಕ್ಷರನ್ನಾಗಿ ಹಾಗೂ ಈ ಶ್ರೀಕೃಷ್ಣಾ ಮಳ್ಳಿ ಯವರನ್ನು ಕಾರ್ಯದರ್ಶಿಯನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಕಲಬುರ್ಗಿಗೆ ಸೇರಿದ ವೃತ್ತಿಬಾಂಧವರಿಗಾಗಿ ಶ್ರೀ ಆರ್.ಜಿ.ಭಟ್ ರವರು ಲೈಟ್ ರೂಮ್ ಬಗ್ಗೆ ಕಾರ್ಯಗಾರವನ್ನು ನಡೆಸಿಕೊಟ್ಟರು.

ಈ ಸಭೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ ಅಖಿಲ ಭಾರತ ಬ್ರಾಹ್ಮಣ ಮಹಾಸಂಘದ ಕಲಬುರ್ಗಿ ಜಿಲ್ಲೆಯು ಪ್ರಧಾನ ಕಾರ್ಯದರ್ಶಿ ಶ್ರೀ ವಿನುತ್ ಜೋಶಿ ಹಾಗೂ ಕೆವಿಸ್‌ವಿಪಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಕೆ. ರಮೇಶ್, ಉಪಾಧ್ಯಕ್ಷರಾದ ಶ್ರೀ ಸತೀಶ್ ಜೋಶಿ, ಕಾರ್ಯದರ್ಶಿ ಶ್ರೀನಿವಾಸ ವೈ.ಕೆ. ಸಹಕಾರ್ಯದರ್ಶಿ ಶ್ರೀ ಸುಧೀರ್ ಹೆಬ್ಬಾರ್, ನಿರ್ದೇಶಕರಾದ ಶ್ರೀ ಪ್ರಸನ್ನ ವಿ. ಕುಲಕರ್ಣಿ, ಶ್ರೀ ಎಸ್. ರಘು ಹಾಗೂ ಶ್ರೀ ಆರ್.ಜಿ.ಭಟ್ ರವರು ಸಭೆಯಲ್ಲಿ ಹಾಜರಿದ್ದರು.



## ಬೇಕಾಗಿದ್ದಾರೆ

**ಬೆಂಗಳೂರಿನ ಜಿಗಣಿ ಹೋಬಳಿಯಲ್ಲಿ ಇರುವ ಎಸ್‌ವ್ಯಾಸ ಯೋಗ ವಿಶ್ವವಿದ್ಯಾಲಯದ ಆವರಣದಲ್ಲಿರುವ ಯೋಗ ವಿನಾಯಕ, ದಕ್ಷಿಣಾಮೂರ್ತಿ ದೇವಸ್ಥಾನಗಳ ದಿನನಿತ್ಯ ಪೂಜೆ, ಸೇವಾ ಕೈಂಕರ್ಯ ನಿರ್ವಹಿಸಲು ಬ್ರಾಹ್ಮಣ ಸ್ಮಾರ್ತ ಪಂಗಡದ ಅರ್ಚಕರೊಬ್ಬರು ಬೇಕಾಗಿದ್ದಾರೆ. ಅರ್ಚಕ / ಪುರೋಹಿತರು ವೈದಿಕ, ಪುರಾಣೋಕ್ತ ಪೂಜಾ ವಿಧಿ ತಿಳಿದುಕೊಂಡಿರಬೇಕು. ಪ್ರತಿದಿನ ಬೆಳಿಗ್ಗೆ-ಸಾಯಂಕಾಲದ ನಿತ್ಯಪೂಜೆಗಳ ಜೊತೆಗೆ ಹೋಮಗಳನ್ನು ನಡೆಸುವ ವಿಧಿ-ವಿಧಾನಗಳನ್ನು ಸಹ ಅರಿತುಕೊಂಡಿರಬೇಕು. ಆ ದೇವಸ್ಥಾನಗಳಲ್ಲಿ ಸಾಮಾನ್ಯವಾಗಿ ವಾರಕ್ಕೆ ನಾಲ್ಕು ಹೋಮಗಳು ನಡೆಯುತ್ತವೆ. ಆಯ್ಕೆಯಾದ ಪುರೋಹಿತರಿಗೆ ವಿಶ್ವವಿದ್ಯಾಲಯದಲ್ಲಿ ಉಚಿತ ಭೋಜನ-ವಸತಿ ವ್ಯವಸ್ಥೆ ಇರುತ್ತದೆ. 50 ವರ್ಷ ಮೇಲ್ಪಟ್ಟವರಿಗೆ ಆದ್ಯತೆ. ಅರ್ಹತೆಗೆ ತಕ್ಕಂತೆ ಮಾಸಿಕ ಸಂಬಳ ನೀಡಲಾಗುತ್ತದೆ.**

**ಆಸಕ್ತರು ಶೀಘ್ರವೇ ಸಂಪರ್ಕಿಸಿ:-ಡಾ|| ಜಿ. ನರಸಿಂಹನ್, 'ಪ್ರಶಾಂತಿ ಕುಟೀರಮ್' ಎಸ್.ವ್ಯಾಸ ಯೋಗ ವಿಶ್ವವಿದ್ಯಾಲಯು, ಜಗಣಿ, ಮೊಬೈಲ್ ಸಂಖ್ಯೆ : 9353615218**

# ಭಾರತೀಯ ಶಾಲಿವಾಹನ ಶಕೆ/ವಿಕ್ರಮ ಶಕೆ ಪಂಚಾಂಗ ವೈಶಿಷ್ಟ್ಯ

ವಿಶ್ವಾದ್ಯಂತ ಎಲ್ಲರೂ ಆಂಗ್ಲ ದಿನದರ್ಶಿಕೆ (ಕ್ಯಾಲೆಂಡರ್) ಯನ್ನು ಬಳಸುತ್ತಿದ್ದಾರೆ. ಪ್ರತಿ ದೇಶಕ್ಕೆ ಅವರದ್ದೇ ಆದ ಪಂಚಾಂಗ/ದಿನದರ್ಶಿಕೆ ಇದೆ ಎಂದು ಬಹಳ ದೇಶವಾಸಿಗಳಿಗೆ ತಿಳಿದಿಲ್ಲ. ಆಂಗ್ಲರು ಈ ದೇಶಕ್ಕೆ ಬಂದು ನಮ್ಮನ್ನು ಆಳಿ, ತಮ್ಮ ಆಂಗ್ಲ ದಿನದರ್ಶಿಕೆಯನ್ನು ಪರಿಚಯಿಸುವವರೆಗೆ ನಮ್ಮದೇ ಶಾಲಿವಾಹನ ಶಕಾರಂಭ/ವಿಕ್ರಮ ಶಕಾರಂಭದ ಪಂಚಾಂಗವಿತ್ತು. ಅದನ್ನೇ ಎಲ್ಲ ಭಾರತೀಯರು ಅನುಸರಿಸುತ್ತಿದ್ದರು. ಆಂಗ್ಲ ಶಿಕ್ಷಣದಿಂದಾಗಿ, ಬ್ರಿಟಿಷರು ಈ ಭಾರತೀಯ ದಿನಪದ್ಧತಿಯನ್ನು ನಾಶ ಮಾಡಿದ್ದರಿಂದಾಗಿ, ಭಾರತೀಯ ಪಂಚಾಂಗ ಪದ್ಧತಿ ದಿನಬಳಕೆಯಿಂದ ದೂರವಾಯಿತು. ಭಾರತೀಯತೆ ಇನ್ನಿಲ್ಲವಾಯಿತು.

ಈಗ ಮೂಡಬಿದ್ರಿಯ ಆಳ್ವಾಸ್ ಪದವಿ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ವಿನಾಯಕ ಭಟ್ಟ ಗಾಳಿಮನೆಯವರು ಆಂಗ್ಲ ದಿನದರ್ಶಿಕೆಗೆ ಪರ್ಯಾಯವಾಗಿ ಭಾರತೀಯ ಶಾಲಿವಾಹನ ಶಕೆ/ವಿಕ್ರಮ ಶಾಖೆ ಪಂಚಾಂಗವನ್ನು ಸಿದ್ಧಪಡಿಸಿ ಪ್ರಕಟಿಸಿದ್ದಾರೆ. ಈ ದಿನದರ್ಶಿಕೆ ಪ್ರತಿವರ್ಷ ಯುಗಾದಿಯಿಂದ ಆರಂಭವಾಗುತ್ತದೆ. ಮುಂದಿನ ಯುಗಾದಿಗೆ ಪೂರ್ಣಗೊಳ್ಳುತ್ತದೆ. ಇದರಲ್ಲಿ ಪ್ರತಿದಿನ ನಮಗೆ ಬೇಕಾಗುವ ತಿಥಿ, ವಾರ, ನಕ್ಷತ್ರ, ಕರಣ, ಯೋಗ, ದಿನ, ದಿನಾಂಕ, ಇಸವಿಯ ಮಾಹಿತಿ ಇದೆ. ಆಂಗ್ಲ ದಿನಾಂಕವನ್ನು ಸಹ ಸೂಚಿಸಲಾಗಿದೆ. ಮುಂಬರುವ ಯುಗಾದಿಯಂದು ಆಕರ್ಷಕ, ವರ್ಣರಂಜಿತ ವಾರ್ಷಿಕ ದಿನದರ್ಶಿಕೆ ಪ್ರಕಟವಾಗಲಿದೆ.

ಉತ್ತರ ಕರ್ನಾಟಕದ ಸಿರ್ಸಿ ಗಾಳಿಮನೆ ಕುಲಕ್ಕೆ ಸೇರಿದ ಡಾ. ವಿನಾಯಕ ಭಟ್ಟರು ತಮ್ಮ ತಂದೆ-ಚಿಕ್ಕಪ್ಪನವರಿಂದ ವೇದಾಧ್ಯಯನ ಹೊಂದಿ, ಉಮ್ಮಚಿಗಿಯ ಶ್ರೀಮಾತಾ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಪ್ರಾಚೀನ ಸಂಸ್ಕೃತ ಶಿಕ್ಷಣ, ಶ್ರೀ ಮನ್ಮಹಾರಾಜಾ ಸಂಸ್ಕೃತ ಮಹಾವಿದ್ಯಾಲಯದಲ್ಲಿ ತರ್ಕಶಾಸ್ತ್ರದಲ್ಲಿ ವಿದ್ವತ್ ಪದವಿ ಪಡೆದು, ಆಧುನಿಕ ಕ್ರಮದಲ್ಲಿ ಬಿ.ಎ. ಎಂ.ಎ. ಪದವಿ ಪಡೆದು, ಕೆನರಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಜಿ.ಎನ್. ಭಟ್ಟರ ಸಮರ್ಥ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ. ಪಡೆದಿದ್ದಾರೆ. ಕಳೆದ ಎರಡು ವರ್ಷಗಳಿಂದ ಈ ಅಪ್ಪಟ ಭಾರತೀಯ ದಿನದರ್ಶಿಕೆಯನ್ನು ಪ್ರಕಟಿಸಿದ್ದಾರೆ. ಇದರ ಆಂಗ್ಲ, ಹಿಂದೀ ಅವತರಣಿಕೆಗಳೂ ಈಗ ಹೊರಬಂದಿವೆ. ಈ ಬಹು ಉಪಯುಕ್ತ ದಿನದರ್ಶಿಕೆಯನ್ನು ವಿಪ್ರಬಂಧುಗಳು ಕೊಂಡುಕೊಳ್ಳಬಹುದು.

**(ಪ್ರತಿ ತಿಂಗಳ ದಿನದರ್ಶಿಕೆಯ ಪ್ರಾಯೋಜನೆಯನ್ನು ಮಾಡಬಹುದು. ಡಾ. ವಿನಾಯಕ ಭಟ್ಟರ ಸಂಪರ್ಕ ಸಂಖ್ಯೆ: 917975354014)**

# ಪ್ರಜ್ಞಾ ಸಂಸ್ಕೃತ ವೇದಿಕೆ ಉದ್ಘಾಟನೆ




ಮೂಡಬಿದಿರೆ: ಆಳ್ವಾಸ್ ಪದವಿ ಕಾಲೇಜು ಹಾಗೂ ಆಳ್ವಾಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯ ಸಹಯೋಗದಲ್ಲಿ ಪ್ರಜ್ಞಾ-ಸಂಸ್ಕೃತ ವೇದಿಕೆಯನ್ನು ಮಿಜಾರಿನ ಕಾಲೇಜಿನ ಆವರಣದಲ್ಲಿ ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಪ್ರನುಡಿ ಪ್ರಧಾನ ಸಂಪಾದಕರೂ ಹಾಗೂ ಬೆಂಗಳೂರಿನ ಎಸ್. ವ್ಯಾಸ್ ಡೀಮ್ಡ್ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಸಚಿವ ಪ್ರೊ॥ ಶ್ರೀಧರ್ ಎಂ.ಕೆ. ಮಾತನಾಡಿ 'ಪ್ರಜ್ಞೆ' ಎಂದರೆ ಚೈತನ್ಯ, ಅಪಾರವಾದ ಅದಮ್ಯ ಶಕ್ತಿಯನ್ನು ಹೊಂದಿರುವಂತಹದ್ದು. ಅದರಿಂದ ಸೃಜನಶೀಲತೆಯನ್ನು ಹಾಗೂ ಪ್ರತಿಭೆಯನ್ನು ಕ್ರೋಢೀಕರಿಸಬಹುದು. ಈ ಪ್ರಜ್ಞೆ ಅಂತರ್ಗತವಾಗಿರುತ್ತದೆ. ಅದನ್ನು ಪ್ರಕಟಿಸಲು ಹಲವಾರು ಮಾರ್ಗಗಳಿದ್ದು ಅವುಗಳಲ್ಲಿ ಮುಖ್ಯವಾದದ್ದು ಅಂತರ್‌ಮೌನ, ಶ್ರವಣ, ಮನನ, ನಿದಿಧ್ಯಾಸನ; ಧಾರಣ ಹಾಗೂ ಧ್ಯಾನ ಎಂದರು. ಪ್ರಜ್ಞೆ ಎನ್ನುವ ಪದದ ಅರ್ಥ ಉಪನಿಷತ್ತುಗಳಲ್ಲಿ ಹೇಗೆ ವರ್ಣಿತವಾಗಿದೆ, ವೇದಗಳಲ್ಲಿ ಈ ಶಬ್ದದ ವಿವೇಚನೆ ಹಾಗೂ ಅಮರಕೋಶವೇ ಮೊದಲಾದ ಕೋಶಗಳಲ್ಲಿ ಪ್ರಜ್ಞಾ ಎನ್ನುವಂತಹ ಪರಿಕಲ್ಪನೆ ಹೇಗೆ ಬೆಳೆದು ಬಂತು ಎಂಬುದನ್ನು ವಿವರಿಸಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಪ್ರಜ್ಞಾ ವೇದಿಕೆಯ ಸಂಯೋಜಕ ಡಾ. ವಿನಾಯಕ ಭಟ್ ಗಾಳಿಮನೆ ಎಲ್ಲ ಭಾಷೆಗಳಿಗೆ ಮಾತೃ ಸ್ವರೂಪದಲ್ಲಿರುವ ಭಾಷೆ. ಅದು ಸಂಸ್ಕೃತ ಭಾಷೆ. ಈ ಭಾಷೆ ನಾಲಿಗೆಯ ಮೇಲೆ ಕುಣಿದಾಡುವ ಅಕ್ಷರಗಳ ಸರಮಾಲೆಯಲ್ಲ. ಅದು ಭಾವನೆಗಳಿಗೆ ರೂಪ ಕೊಟ್ಟಂತ ಭಾವ ಭಾಷೆ, ದೇವ ಭಾಷೆ, ದೇಶ ಭಾಷೆ. ಇಂತಹ ಭಾಷೆಯನ್ನು ಉಳಿಸಿ, ಬೆಳಸಿ, ಕಟ್ಟುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಜ್ಞಾ ಎಂಬ ಈ ವೇದಿಕೆ ಸಂಸ್ಕೃತದ ಉಳಿವಿಗೆ ಕಾರಣವಾಗಬೇಕು ಎಂದು ತಿಳಿಸಿದರು. ಮ್ಯಾನೇಜ್ಮೆಂಟ್ ಟ್ರಸ್ಟಿ ವಿವೇಕ್ ಆಳ್ವ ಮಾತನಾಡಿ, ಭಾರತದ ಪ್ರಾಚೀನ ಭಾಷೆಗಳಲ್ಲೊಂದಾದ ಸಂಸ್ಕೃತ ಭಾಷೆಯನ್ನು ಉಳಿಸಿ, ಬೆಳೆಸೋಣ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಡಾ.ಪೀಟರ್ ಫರ್ನಾಂಡೀಸ್, ಸಂಸ್ಕೃತ ವಿಭಾಗದ ಮುಖ್ಯಸ್ಥ ಡಾ. ರಮಾನಂದ್ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕುಮಾರಿ ಅನಘ ಎಂ. ನಿರೂಪಿಸಿ, ಸಿಂಧೂ ಭಟ್ ಸ್ವಾಗತಿಸಿದರು. ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಡಾ. ರಮಾನಂದ ವಂದಿಸಿದರು.

## ಶ್ರೀ ಕೆ.ಜಿ. ಸುಬ್ರಾಯ ಶರ್ಮರ 145 ನೇ ಕೃತಿರತ್ನ

# "ಸ್ರಗ್ಧರಾವೃತ್ತಸಂಗ್ರಹ–ಲೋಕಾರ್ಪಣೆ



**ಎಡದಿಂದ ಬಲಕ್ಕೆ ಡಾ॥ ಬಿ.ಎಸ್. ರಾಮಕೃಷ್ಣರವರು, ಡಾ॥ ಎಂ.ಕೆ. ಶ್ರೀಧರ್, ಡಾ॥ ವೈ.ಎಸ್. ಗಾಯತ್ರಿ, ಶ್ರೀಮತಿ ರಾಜೇಶ್ವರಿ ಶರ್ಮಾ, ಡಾ॥ ಕೆ.ಜಿ. ಸುಬ್ರಾಯ ಶರ್ಮಾ, ಡಾ॥ ಆರ್. ಎನ್. ನಾಗರಾಜ್ ರವರು.**

"ಡಾ॥ ಕೆ.ಜಿ. ಸುಬ್ರಾಯ ಶರ್ಮಾ" ರವರಿಂದ ರಚಿತವಾಗಿರುವ ಈ ಕೃತಿರತ್ನದಲ್ಲಿ ಸ್ರಗ್ಧರಾ ಛಂದಸ್ಸಿನಲ್ಲಿರುವ ಅನೇಕ ವೇದಾಂತ, ಸುಭಾಷಿತ, ಆಧ್ಯಾತ್ಮಿಕ ಮೊದಲಾದ ವಿಷಯಗಳಲ್ಲಿ ಪ್ರಸಿದ್ಧವಾದ 40 ಶ್ಲೋಕಗಳನ್ನು ಆರಿಸಿಕೊಂಡು ಪದಚ್ಛೇದ, ಅನ್ವಯ, ವಿವರಣೆ ಸಹಿತ ಇರುವ ಈ ಗ್ರಂಥವನ್ನು ಡಾ। ಬಿ.ಎಸ್. ರಾಮಕೃಷ್ಣರವರು ಗ್ರಂಥ ಲೋಕಾರ್ಪಣೆ ಮಾಡಿದರು. ಗ್ರಂಥ ಪರಿಚಯವನ್ನು ಡಾ। ಆರ್. ಎನ್. ನಾಗರಾಜ್ ರವರು ಮಾಡಿದರು, ಮುಖ್ಯ ಅತಿಥಿಗಳಾದ ಡಾ। ವೈ.ಎಸ್. ಗಾಯತ್ರಿ ಯವರು ಗ್ರಂಥದ ಬಗ್ಗೆ ಮಾತನಾಡಿದರು. ಪ್ರೊ॥ಎಂ.ಕೆ. ಶ್ರೀಧರ್ ರವರು ಅಧ್ಯಕ್ಷತೆ ವಹಿಸಿದ್ದರು. ಡಾ॥ ಕೆ.ಜಿ. ಸುಬ್ರಾಯ ಶರ್ಮಾ ದಂಪತಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತ ರಾಗಿದ್ದರು.

**ಗ್ರಂಥದ ಬಗ್ಗೆ:** ಈ ಗ್ರಂಥದಲ್ಲಿ ಶ್ರೀ ಶರ್ಮರು, ಸ್ರಗ್ಧರಾವೃತ್ತ ಛಂದಸ್ಸು ಎಂದರೇನು? ಈ ಛಂದಸ್ಸಿನ ಶ್ಲೋಕಗಳಲ್ಲಿ ಎಷ್ಟು ಅಕ್ಷರಗಳಿರುತ್ತವೆ? ಈ ಛಂದಸ್ಸಿನ ಮುಖ್ಯವಾದ ಶ್ಲೋಕಗಳು ಯಾವುವು ಮುಂತಾದ ವಿಷಯ ಗಳನ್ನು ಅರ್ಥ ಸಹಿತ ಬಹಳ ಸುಂದರವಾಗಿ ನಿರೂಪಿಸಿದ್ದಾರೆ.

# ಹಾಸನದಲ್ಲಿ ಬಬ್ಬೂರುಕಮ್ಮೆ ಸೇವಾ ಸಂಘದ ರಜತಮಹೋತ್ಸವ



**ಹಾಸನದಲ್ಲಿ ನಡೆದ ಬಬ್ಬೂರಕಮ್ಮೆ ಸಂಘದ ರಜತೋತ್ಸವದ ಸಮಾರೋಪ ಸಮಾರಂಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಹಾಗೂ ಸಂಘದ ಪದಾಧಿಕಾರಿಗಳು.**

'ವಿಪ್ರರ ಬಗ್ಗೆ ಸಮಾಜದಲ್ಲಿ ಸಾಕಷ್ಟು ಗೌರವವಿದೆ. ಈ ನಮ್ಮ ಸಮುದಾಯದ ಗೌರವವನ್ನು ಉಳಿಸಿ ಬೆಳೆಸಿಕೊಂಡು ಪೂರ್ವಿಕರ ಮಾರ್ಗದರ್ಶನದಂತೆ ನಡೆಯೋಣ. ಯಾವುದೇ ಬೇಡಿಕೆಗೆ ಬೀದಿಗೆ ಇಳಿದು ಹೋರಾಟ ಮಾಡದೆ, ಸ್ವತಂತ್ರವಾಗಿ ಇತರರಿಗೆ ಮಾರ್ಗದರ್ಶಕ ರಾಗಿರಬೇಕೆಂದು' ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರು, ಮಲೆನಾಡು ತಾಂತ್ರಿಕ ವಿದ್ಯಾಸಂಸ್ಥೆ ಅಧ್ಯಕ್ಷರು, ಆಧ್ಯಾತ್ಮಿಕ ಚಿಂತಕರು ಹಾಗೂ ಕರ್ನಾಟಕ ಮಾಜಿ ಅಡ್ವೋಕೇಟ್ ಜನರಲ್ ಆಗಿ ಸೇವೆ ಸಲ್ಲಿಸಿರುವ ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿಯವರು ವಿಪ್ರ ಸಮುದಾಯಕ್ಕೆ ಕರೆ ನೀಡಿದರು. ಅವರು ಇದೇ 25ರಂದು ನಗರದ ಶ್ರೀ ಶೃಂಗೇರಿ ಶಂಕರಮಠದಲ್ಲಿ 24 ಮತ್ತು 25ರಂದು ಏರ್ಪಡಿಸಿದ್ದ ಜಿಲ್ಲಾ ಬಬ್ಬೂರುಕಮ್ಮೆ ಸಂಘದ **"ರಜತೋತ್ಸವ ಹರ್ಷ"** ಹಾಗೂ ಶ್ರೀ ಗಾಯತ್ರಿ ಭವನದ ದಶಮಾನೋತ್ಸವ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದು ಸಮಾರೋಪ ಭಾಷಣ ಮಾಡುತ್ತಾ, ಮೇಲಿನಂತೆ ತಿಳಿಸಿದರು. ಮುಂದು ವರೆದ ಅವರು ಆರ್ಥಿಕ ವಾಗಿ ಮುಂದುವರೆದರೂ ಸಾಂಸ್ಕೃತಿಕವಾಗಿ ಮುಂದುವರೆದಿಲ್ಲ. ನಾವು ಎಂದು ಮೀಸಲಾತಿ ಕೇಳಲ್ಲ, ಸಂವಿಧಾನ ದಲ್ಲೂ ಜಾರಿ ಮಾಡಿಲ್ಲ. ನಮ್ಮ ಪರಂಪರೆ ಕಾಪಾಡಿ ಉಳಿಸುವುದೇ ನಮ್ಮ ಗುರಿ ಎಂದು ಕರೆ ನೀಡಿದರು.

ಕಾರ್ಯಕ್ರಮಕ್ಕೆ ಬಬ್ಬೂರುಕಮ್ಮೆ ಸಂಘದ ಕಾರ್ಯದರ್ಶಿ ರಾಜೇಂದ್ರನಾಥ್‌ರವರು ಸ್ವಾಗತಿಸಿದರು. ವೇದಿಕೆಯಲ್ಲಿ ಗೌರವಾನ್ವಿತರಾದ ಎಂ.ಎಸ್. ಶ್ರೀಕಂಠಯ್ಯ ಉಪಸ್ಥಿತರಿದ್ದರು. ಜಿಲ್ಲಾ ಅಧ್ಯಕ್ಷರಾದ ಕೆ.ಎಸ್. ನಾಗರಾಜ್ ಗೌರವಾರ್ಪಣೆ ನೆರವೇರಿಸಿದರು. ನಂತರ ಬಬ್ಬೂರುಕಮ್ಮೆ ಮಹಿಳಾ ಘಟಕದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕಿಕ್ಕೇರಿ ಕೃಷ್ಣಮೂರ್ತಿ ತಂಡದಿಂದ ಸಂಗೀತ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮವನ್ನು ಶ್ರೀಮತಿ ನಳಿನಾ ಪ್ರಸಾದ್ ಸುಂದರವಾಗಿ ನಿರೂಪಿಸಿದರು. ನಿರ್ದೇಶಕರಾದ ಜಿ.ಆರ್. ರಾಮಚಂದ್ರ ವಂದಿಸಿದರು. ಮಹಿಳಾ ಘಟಕದ ಪದಾಧಿಕಾರಿಗಳು ಜಿಲ್ಲಾ ಸಂಘದ ಪದಾಧಿಕಾರಿಗಳು ಎಲ್ಲ ರೀತಿಯಲ್ಲೂ ಸಹಕರಿಸಿದರು. ಇದೇ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರನ್ನು ಸಂಘದ ವತಿಯಿಂದ ಸನ್ಮಾನಿಸಿದರು. ಕೊನೆಯಲ್ಲಿ ಜಿಲ್ಲಾ ಅಧ್ಯಕ್ಷ ಕೆ.ಎಸ್.ನಾಗರಾಜ್ ಸಹಕರಿಸಿದ ಸಮಸ್ತರಿಗೂ ಅಭಿನಂದಿಸಿ, ಮುಂದೆಯೂ ಸಂಘಕ್ಕೆ ಇದೇ ರೀತಿ ಸಹಕಾರ ನೀಡಬೇಕೆಂದು ವಿನಂತಿಸಿದರು.

### ಶ್ರೀ ಹೆಚ್.ಜಿ. ಕೇಶವಮೂರ್ತಿ ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಗಮಕ ಗಂಧರ್ವ, ಪದ್ಮಶ್ರೀ ಪುರಸ್ಕೃತ ಶ್ರೀ ಹೆಚ್.ಜಿ. ಕೇಶವಮೂರ್ತಿ ನಮ್ಮನ್ನಗಲಿದ್ದಾರೆ. ಶ್ರೀಯುತ ಹೆಚ್.ಆರ್. ಕೇಶವಮೂರ್ತಿ ಇಂಗ್ಲಿಷ್ ಮೂಲಕ ಅನುವಾದಿತ ಪುಸ್ತಕ ಭಾರತೀಯ ಗಮಕ ಘಾತಕ ಮತ್ತು ಗುರು. ಅವರಿಗೆ 1998ರಲ್ಲಿ ಕರ್ನಾಟಕ ಸರ್ಕಾರದಿಂದ ಶಾಂತಲಾ ನಾಟ್ಯಶ್ರೀ ಪ್ರಶಸ್ತಿ ಮತ್ತು 2022ರಲ್ಲಿ ಭಾರತ ಸರ್ಕಾರವು ಕಲಾ ಕ್ಷೇತ್ರದಲ್ಲಿ ಪದ್ಮಶ್ರೀಯನ್ನು ನೀಡಿ ಗೌರವಿಸಿರುವುದನ್ನು ಸ್ಮರಿಸುತ್ತಾ, ಶ್ರೀಯತರ ಆತ್ಮಕ್ಕೆ ಚಿರಶಾಂತಿಯನ್ನು ಅವರ ಅಭಿಮಾನಿ ಬಳಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ವೇದಮಾತೆ ಗಾಯತ್ರಿ ದೇವಿಯನ್ನು ಪ್ರಾರ್ಥಿಸುತ್ತೇವೆ.

### ಶ್ರೀ ಎಂ.ಎಸ್. ನಂಜುಂಡಸ್ವಾಮಿ ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಂ.ಎಸ್. ನಂಜುಂಡ ಸ್ವಾಮಿ, ಆಡಳಿತಾಧಿಕಾರಿಗಳು, ಕಾಮಧೇನು ಗಣಪತಿ ದೇವಸ್ಥಾನ, ಚಿಕ್ಕಮಗಳೂರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಹಿಂದಿನ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಇತ್ತೀಚೆಗೆ ನಿಧನರಾದರೆಂದು ತಿಳಿಸಲು ವಿಷಾದಿಸು ತ್ತೇವೆ. ಶ್ರೀಯುತರ ಆತ್ಮಕ್ಕೆ ಶಾಂತಿ ದೊರಕಲೆಂದು ವೇದಮಾತೆ ಗಾಯತ್ರೀ ದೇವಿಯನ್ನು ಮಹಾಸಭೆಯು ಪ್ರಾರ್ಥಿಸುತ್ತದೆ.

### ತಿದ್ದುಪಡಿ

ದಿನಾಂಕ 21.09.2022ಕ್ಕೆ 140ನೇ ಜನ್ಮದಿನವೆಂದು ಸ್ಮರಿಸುವ ಬೆಳ್ಳಾವೆ ನರಹರಿ ಶಾಸ್ತ್ರಿಗಳು **21.06.1961**ರಂದು ಮಲ್ಲೇಶ್ವರದ ಸ್ವಗೃಹದಲ್ಲಿ ನಿಧನರಾದರು ಎಂದು ತಿದ್ದುಪಡಿ ಮಾಡಲಾಗಿದೆ.


IIShri Shankaralinga VijayateII




Reg No:BK-IV 152/19-20

ಆನಂದಾಸ್ ಸೇವಾ ಸದನ ಟ್ರಸ್ಟ್ (ರಿ)

Ananda's Seva Sadana Trust ®

'Senior Citizen Home Geriatric Home & Rehabilitation Centre'

**Facilities Available :**

- Geriatric/Oldage Care
- Emergency Oxygen Facility
- BIPAP/CPAP Care
- Blood Investigation
- Doctor/Nurses/Physiotherapists
- Television, WiFi, CCTV Surveillance
- Daily activities: Yoga, Bhajans, Meditation
- 24/7 Nursing Care
- Ambulance Facility
- Wheel Chair, walkmate
- RT/PEG Feed

OLD AGE HOME EXCLUSIVE FOR BRAHMINS

Dressing | injections | catheterization | IV Cannulation | RT/PEG Feeding



76762 89023 63625 43616 70906 95002

Anandas Brahmin anandassevasadana@gmail.com

www.anandassevasadana.com

We believe if you want Happiness in Life, Never be a Owner of Love, Always be Donor of Love !!

UNIT - 1 : # 40, 4th Main Road, 3rd Stage, BEML layout, Rajarajeshwari Nagar, Bengaluru - 560 098.
Ph : 080 - 4211 5788

UNIT - 2 : # 4-15, Survey No: 56, Muragappa Layout, Jawaregowda Nagar, Rajarajeshwari Nagar, Bengaluru - 560 098.
Ph : 080 - 4149 6133

# ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು.

**ಸುರೇಶ್ ಮೂನ**



ಮಾಧ್ವ ಸಂಪ್ರದಾಯಕ್ಕೆ ಸೇರಿದ ಆಲೂರು ವೆಂಕಟರಾಯರು ತಮ್ಮ ಇಡೀ ಜೀವನವನ್ನು ಕನ್ನಡ ನಾಡುನುಡಿಯ ಅಭ್ಯುದಯವನ್ನೆ ಗುರಿಯಾಗಿಟ್ಟುಕೊಂಡು ಅದರ ಯಶಸ್ಸಿಗಾಗಿ ಅವಿರತವಾಗಿ ಶ್ರಮಿಸಿ ಅದರಲ್ಲಿ ಗೆಲುವನ್ನು ಕಂಡವರು. ಹಿಗಾಗಿ, ಸರ್ವಕಾಲಕ್ಕೂ ಕನ್ನಡ ಕುಲಪುರೊಹಿತರೆಂದೇ ಖ್ಯಾತಿ ಪಡೆದ ಆಲೂರರು ನಮ್ಮ ಕನ್ನಡ ಜನತೆ ಎಂದೂ ಮರೆಯಲಾಗದ ಪ್ರಾತಃಸ್ಮರಣೀಯರು.

ಆಲೂರರು ಬಿಜಾಪುರದಲ್ಲಿ 1880 ಜುಲೈ 12ರಂದು ಜನಿಸಿದರು. ಅವರ ಊರು ಆಗಿನ ಧಾರವಾಡದ ರೋಣಾ ತಾಲೂಕಿನ ಹೊಲೆ ಆಲೂರು.ತಂದೆಭೀಮರಾಯರು.ತಾಯಿ ಭಾಗೀರಥೀಬಾಯಿ. ಧಾರವಾಡದಲ್ಲಿ ವಿದ್ಯಾರ್ಥಿ ಜೀವನ ಕಳೆಯಿತು. ಆಗಲೇ ಕನ್ನಡ ಭಾಷೆ,ಸಾಹಿತ್ಯ ಮುಂತಾದ ವಿಷಯಗಳ ಬಗ್ಗೆ ಇವರಲ್ಲಿ ಆಸಕ್ತಿ ಮೂಡಿಸುವ ಪ್ರಸಂಗಗಳು ಒದಗಿ ಬಂದವು.

ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ವಿದ್ಯಾಭಾಸ ನಡೆಸುತ್ತಿದ್ದಾಗ ಭಾಟೆ, ಕರ್ವೆ, ರಾಜವಾಡೆ, ಗೋಖಲೆ ಮುಂತಾದ ಮಹನೀಯರುಗಳು ಇವರಿಗೆಸ್ಫೂರ್ತಿಯ ಮೂಲವಾದರು. ವೀರಸಾವರ್ಕರ್ ಅವರ ಒಡನಾಟ ಇವರಲ್ಲಿ ರಾಷ್ಟ್ರಭಕ್ತಿಯು ನಿಷ್ಠೆಯಿಂದ ಒಡಗೂಡಿದ ಕರ್ತವ್ಯ ಸ್ವರೂಪವನ್ನು ಪಡೆಯಲು ಕಾರಣವಾಯಿತು. ಬಾಲಗಂಗಾಧರ ತಿಲಕರಂತೂ ಇವರ ತಾರುಣ್ಯದ ಆರಾಧ್ಯ ಪುರುಷರಾಗಿಬಿಟ್ಟಿದ್ದರು.

ಮುಂದೆ ಕರ್ನಾಟಕ ವಿಧ್ಯಾವರ್ಧಕ ಸಂಘವನ್ನು ಪ್ರವೇಶಿದ ಆಲೂರರು ಅದನ್ನು ಮುನ್ನೆಡೆಸುವ ಜವಾಬ್ದಾರಿಯನ್ನು ವಹಿಸಿ ಕೊಂಡರು. 'ವಾಗ್ಭೂಷಣ' ಪತ್ರಿಕೆಯ ಸಂಪಾದಕತ್ವವನ್ನು ಸ್ವೀಕರಿಸಿ, ಶ್ರಮವಹಿಸಿ ಆ ಪತ್ರಿಕೆಗೆ ಹೊಸ ಸ್ವರೂಪವನ್ನು ನೀಡಿದರು. 1915ರಲ್ಲಿ ಕನ್ನಡ ಸಾಹಿತ್ಯಪರಿಷತ್ ಸ್ಥಾಪನೆ ಯಾಗುವುದರಲ್ಲೂ ಇವರುರೂವಾರಿಯಾಗಿದ್ದರು.

ಆಲೂರರು ಮೊತ್ತಮೊದಲ ಕೃತಿ,'ಕರ್ನಾಟಕ ಸಿಂಹಾಸನ ಸ್ಥಾಪಾನಾಚಾರ್ಯ ವಿದ್ಯಾರಣ್ಯರು.'ಕರ್ನಾಟಕತ್ವದ ಅಭಿಮಾನ ಹುಟ್ಟಿಸುವುದಕ್ಕೆ ನಾನು ಬರೆದ ಮೊತ್ತ ಮೊದಲ ಪುಸ್ತಕ ಈವಿದ್ಯಾರಣ್ಯರ ಚರಿತ್ರೆ' ಎಂದು ಅವರೇಹೇಳಿಕೊಂಡಿದ್ದಾರೆ.

**ಹೇಗೆ ರಾಷ್ಟ್ರ ಪ್ರೇಮವನ್ನು ದೇಶದ ಪ್ರತಿಯೊಬ್ಬ ನಾಗರೀಕನೂ ಬೆಳೆಸಿಕೊಂಡಿರಬೇಕೋ ಹಾಗೇ ಕನ್ನಡ ಭಾಷೆ ಮತ್ತು ಕರ್ನಾಟಕದ ರಾಜ್ಯದ ಬಗ್ಗೆ ಇಲ್ಲಿನ ಜನರಲ್ಲಿ ಆದರ ಗೌರವಗಳನ್ನು ಬಲಪಡಿಸಿದರೆ ರಾಷ್ಟ್ರೀಯತೆಯನ್ನು ಸಾಧಿಸುವುದು ಸುಲಭವೆಂದು ಮನಗಂಡವರೇ ಆಲೂರು ವೆಂಕಟರಾಯರು.** 1912ರಲ್ಲಿಆಲೂರು ವೆಂಕಟರಾಯರುತಮ್ಮಮೇರು ಕೃತಿ'ಕರ್ನಾಟಕ ಗತವೈಭವ'ವನ್ನು ಪ್ರಕಟಿಸಿದರು. ಇದು ಸಮಸ್ತ ಕನ್ನಡಿಗರ ಕಣ್ತೆರೆಸಿದ ಮಹಾನ್ ಕೃತಿಯಾಯಿತು.

**ಮುಂದೆಕರ್ನಾಟಕ ಏಕೀಕರಣಚಳುವಳಿಒಂದು ಸ್ಪಷ್ಟ ಸ್ವರೂಪವನ್ನು ಪಡೆಯಲು ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಯುವಕರು ಸಾರ್ವಜನಿಕರು ಮುಂತಾದವರಿಗೆಲ್ಲ ಸ್ಪೂರ್ತಿಯ ಸೆಲೆಯಾಗಿದ್ದು ಈ ಅಮೂಲ್ಯ ಗ್ರಂಥರತ್ನವೇ.**

ಆಲೂರರು**'ಕರ್ನಾಟಕ**ದ ವೀರರತ್ನಗಳು', 'ಕರ್ನಾಟಕತ್ವದ ಸೂತ್ರಗಳು'ಮತ್ತು **'ಕರ್ನಾಟಕ**ದ ವಿಕಾಸ' ಎಂಬ ತ್ರಿವಳಿ ಗ್ರಂಥಗಳನ್ನು ಬರೆಯುವುದರ ಮೂಲಕ ಈನಾಡಿನ ಸಮಗ್ರ ದರ್ಶನವನ್ನು ಜನತೆಗೆ ಮಾಡಿಸಿದರು.**ಕರ್ನಾಟಕ ಏಕೀಕರಣದ**ಪ್ರತಿಯೊಂದು ಕಾರ್ಯದ ಎಲ್ಲಾ ಹಂತಗಳಲ್ಲಿಯೂ ತಮ್ಮನ್ನೆ ತಾವು ಅರ್ಪಿಸಿಕೊಂಡು ಬಿಟ್ಟಿದ್ದರು. ಹೊಸ ನಾಡಿನ ನಿರ್ಮಾಣಕ್ಕೆ ಅವಶ್ಯಕತೆಯಿದ್ದ ವಿಶ್ವ **ಕರ್ನಾಟಕದ** ಭಿತ್ತಿ ಚಿತ್ರಗಳನ್ನು ರೂಪಿಸಿದರು. ಅಷ್ಟೇ ಅಲ್ಲದೆ ಅದು ಸಮಸ್ತ ಕನ್ನಡಿಗರ ಮನೆಮನಗಳಲ್ಲಿ ನೆಲೆಗೊಳ್ಳುವಂತೆ ಮಾಡಿದರು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬೆಳಗಾವಿಯ ಅನೇಕ ಮುಖಂಡರು ಭೂಗತ ಚಟುವಟಿಕೆಗಳಲ್ಲಿತೊಡಗಿದ್ದರು. ಉತ್ತರಕನ್ನಡದ ಶಿರಸಿಯ ಆಂಗ್ಲ ಶಾಲೆಯೋಂದರಲ್ಲಿ ಹೆಡ್ ಮಾಸ್ತರ ಆಗಿದ್ದ ತಿಮ್ಮಪ್ಪನಾಯಕ ರಾಷ್ಟ್ರೀಯಶಾಲೆಯೊಂದನ್ನು ಸೇರಿದರು. ಆಗ ಸುಶಿಕ್ಷಿತರು ಇಂತಹ ರಾಷ್ಟ್ರಿಯ ಶಾಲೆಗಳನ್ನು ತೆರೆದು ದೇಶದ ಬಗ್ಗೆ ಮುಂದಿನ ಪೀಳಿಗೆಯಲ್ಲಿ ಅಭಿಮಾನವನ್ನು

ಮೂಡಿಸಲು ಮುಂದಾದರು. 1921ರಲ್ಲಿ ಮಂಗಳೂರಿನಲ್ಲಿ ಕಾರ್ನಾಡ ಸದಾಶಿವರಾಯರು ಶಾಲೆಯನ್ನು ಪ್ರಾರಂಭಿಸಿದರೆ, ಧಾರವಾಡದಲ್ಲಿ ಅಲೂರು ವೆಂಕಟರಾಯರು ಅಂತಹ ಶಾಲೆಯನ್ನು ಸ್ಥಾಪಿಸಿದರು. ಇಲ್ಲಿ ನಮ್ಮ ನಾಡಿನ ಮಹಾನ್ ಚೇತನಗಳಾದ ಶಂ.ಬಾ. ಜೋಷಿ, ದ.ರಾ. ಬೇಂದ್ರೆ, ಆರ್.ಆರ್ ದಿವಾಕರ್ ಅಂತಹವರು ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಹೀಗೆ ಆಗ,ಕರ್ನಾಟಕದಲ್ಲಿ ಒಟ್ಟು ಐವತ್ತು ಶಾಲೆಗಳಿದ್ದವು.

ಆಲೂರರು ಕನ್ನಡ ನಾಡಿನ ಸಮಗ್ರ ಅಭಿವೃದ್ಧಿಯನ್ನು ಗಮನ ದಲ್ಲಿ ಇಟ್ಟುಕೊಂಡು ವಿವಿಧ ಸ್ಥರಗಳಲ್ಲಿ ಕಾರ್ಯೋನ್ಮುಖ ರಾಗಿದ್ದರು. ಸಂಘ ಸಂಸ್ಥೆಗಳ, ವಾಚನಾಲಯಗಳ,ಐತಿಹಾಸಿಕ ಸಂಶೋಧನಾ ಕಾರ್ಯಗಳನ್ನು ಚಳುವಳಿಯ ರೂಪದಲ್ಲಿ ಕೈಗೊಂಡರು. ಧಾರವಾಡದಲ್ಲಿ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ ವನ್ನು ಸ್ಥಾಪಿಸಿ 'ಪ್ರಾಚೀನ ಕರ್ನಾಟಕ' ಎಂಬ ಆಂಗ್ಲ ಕನ್ನಡ ಅರ್ಧ ವಾರ್ಷಿಕ ಪತ್ರಿಕೆಯನ್ನು ನಡೆಸಿದರು.ಎಲ್ಲಕ್ಕಿಂತ ಹೆಚ್ಚಾಗಿ, ಕರ್ನಾಟಕ ಪತ್ರಿಕಾ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದ 'ಜಯ ಕರ್ನಾಟಕ' ಪತ್ರಿಕೆಯನ್ನು ಸ್ಥಾಪಿಸಿ ನಡೆಸಿಕೊಂಡು ಬಂದರು. ಈ ಮಹಾನುಭಾವರು 1964ರ ಫೆಬ್ರವರಿ 25 ರಂದು ದೈವಾಧೀನರಾದರು.

1889 ರ ನವೆಂಬರ್‌ನಲ್ಲಿ ಇಂಡಿಯಾ ದೇಶದ ಪ್ರವಾಸ ಕೈಗೊಂಡಿದ್ದ ವ್ಹೇಲ್ಸ್‌ನ ರಾಜಕುಮಾರ ಆಲ್ಬರ್ಟ್ ವಿಕ್ಟರ್ ಅದೇ ತಿಂಗಳ 30ರಂದು ಬೆಂಗಳೂರಿನಲ್ಲಿ ಲಾಲ್ ಬಾಗ್‌ನ ಗಾಜಿನ ಮನೆಯ ನಿರ್ಮಾಣಕ್ಕೆ ಶಂಖುಸ್ಥಾಪನೆ ಮಾಡಿದರು.

ಆಗ, ಅವರ ಭೇಟಿಯ ನೆನಪಾಗಿ ಕಲಾಸಿಪಾಳ್ಯದ ಈಗಿನ ಬಸ್ ಸ್ಟ್ಯಾಂಡ್‌ನಿಂದ ಪ್ರಾರಂಭವಾಗಿ ಮಿಂಟೊ ಕಣ್ಣಾಸ್ಪತ್ರೆಗೆ ಸೇರಿದಂತೆ ಇರುವ ಕೈಲಾಸಂವೃತ್ತದಿಂದ ಚಾಮರಾಜ ಪೇಟೆ ಐದನೆ ಮೇನ್ ಆಗಿ ಮುಂದುವರೆದು ಮೈಸೂರು ರಸ್ತೆಯನ್ನು ಸೇರುವ ಉದ್ದನೆಯ ಮಾರ್ಗಕ್ಕೆ ಆಲ್ಬರ್ಟ್ ವಿಕ್ಟರ್‌ನ ಹೆಸರಿಡಲಾಯಿತು. ಕ್ರಮೇಣ ಇದು ಉದ್ದವಾಯಿತೆಂದು ಎ.ವಿ ರಸ್ತೆ ಎಂದು ಚಿಕ್ಕದಾಗಿಸಿದರು.

ತದನಂತರದ ಕಾಲದಲ್ಲಿ ಆಲ್ಬರ್ಟ್ ವಿಕ್ಟರ್ ರಸ್ತೆಗೆ ಆಲೂರು ವೆಂಕಟರಾಯರ ಹೆಸರನ್ನು ಇಡಲಾಯಿತು. ಅದೂ ಚಿಕ್ಕದಾಗಿ ಎ.ವಿ. ರಸ್ತೆಯಾಯಿತು. ಆದರೆ,ಕೈಲಾಸಂ ವೃತ್ತದಲ್ಲಿ ಒಂದು ಬದಿಗೆ ಕಪ್ಪು ಗ್ರಾನೈಟ್ ಶಿಲಾಫಲಕದಲ್ಲಿ ಇಂದಿಗೂಆಲೂರು ವೆಂಕಟರಾಯರ ರಸ್ತೆ ಎಂಬ ಹೆಸರು ರಾರಾಜಿಸುವುದನ್ನು ಕಾಣಬಹುದು.


ಜಾಹಿರಾತು

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ

ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**



## ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಾಹ್ಮಣರ ಪಾತ್ರ –4

# ತಾತ್ಯಾ ಟೋಪೆ

–ಛಾಯಾಪತಿ ಕೆ.ಎನ್.,
ಹಿರಿಯ ಪದಾಧಿಕಾರಿಗಳು

ಅನೇಕ ಧೀರ ಪುರುಷರು, ಮಹಾತ್ಮರು,ವೀರಕಟ್ಟಾಳುಗಳು ಮತ್ತು ಕ್ರಾಂತಿಕಾರಿಗಳಿಗೆ ಜನ್ಮ ಕೊಟ್ಟ ತಾಯಿ ಭಾರತಿಯ ಗರ್ಭ ಶ್ರೀಮಂತ ವಾದದ್ದು, ಶ್ರೇಷ್ಠವಾದದ್ದು .ಅಂತಹ ಪುಣ್ಯಗರ್ಭದಿಂದ ಜನಿಸಿದ ಬ್ರಾಹ್ಮಣ ಕ್ರಾಂತಿಕಾರಿ ಒಬ್ಬನ ಪರಿಚಯವನ್ನು ಮಾಡಿಕೊಳ್ಳೊಣ ಬನ್ನಿ.

ಗಾಂಧಿ ಟೋಪಿಯ ಹೆಸರು ಜನಜನಿತವಾದದ್ದು. ಆದರೆ ಟೋಪೆ ಹೆಸರಿನೊಂದಿಗೆ ಸಮ್ಮಿಳಿತವಾಗಿರುವ ಮತ್ತೊಂದು ಹೆಸರು ಹೆಚ್ಚು ಜನಜನಿತವಾಗಿಲ್ಲ. ಅದೇ ತಾತ್ಯಾ ಟೋಪಿ.(ಟೋಪಿ ಕಾಲಕ್ರಮೇಣ ಟೋಪೆ ಆಯಿತು)ಒಂದು ಟೋಪಿ ಶಾಂತಿಯ ಪ್ರತೀಕ ಇನ್ನೊಂದು ಕ್ರಾಂತಿಯ ಪ್ರತೀಕ ಈ ಎರಡೂ ಪ್ರತೀಕಗಳ ಆಘಾತ ದಿಂದಲೇ ಆಂಗ್ಲರು ಭಾರತಬಿಟ್ಟು ತೊಲಗಿದರು. ನಮಗೆ ಸ್ವಾತಂತ್ರ್ಯ ಲಕ್ಷ್ಮಿ ದೊರಕಿದಳು. ಇದೊಂದು ಸಾಮಾನ್ಯ ಟೋಪಿಯಲ್ಲ. ಪುಳುಚಾರು ತಿನ್ನುವ ಬ್ರಾಹ್ಮಣ ಜನಾಂಗದಲ್ಲಿ ಜನಿಸಿ ಯಾವ ಕ್ಷತ್ರಿಯನಿಗೂ ಕಡಿಮೆ ಇಲ್ಲದಂತೆ ಹೋರಾಡಿ ಬ್ರಿಟಿಷರ ತೊಡೆ ನಡುಗಿಸಿದ ವೀರ ಕ್ರಾಂತಿಕಾರಿಯ ತಲೆಯ ಮೇಲಿದ್ದ ಟೋಪಿ. ಪುಣೆ ಪ್ರಾಂತದ ಎರಡನೇ ಬಾಜಿರಾಯನ ಆಸ್ಥಾನದಲ್ಲಿ ಉನ್ನತ ಸ್ಥಾನ ಪಡೆದಿದ್ದ ತಂದೆಯ ಜೊತೆ ಒಮ್ಮೊಮ್ಮೆ ಬಾಲಕ ತಾತ್ಯಾ ಟೋಪೆಯೂ ಹೋಗುತ್ತಿದ್ದ. ಗಂಭೀರ ಮುಖ ಮುದ್ರೆ, ಹೊಳಪು ಕಣ್ಣಿನಿಂದ ಕೂಡಿದ ಈತನನ್ನು ನೋಡಿದ ಬಾಜಿರಾಯ ರತ್ನಖಚಿತವಾದ ಒಂದು ಟೋಪಿಯನ್ನು ಆತನಿಗೆ ಉಡುಗರೆಯಾಗಿ ಕೊಡುತ್ತಾನೆ .ಅದನ್ನು ಅವನು ಜೀವನದುದ್ದಕ್ಕೂ ಧರಿಸುತ್ತಾನೆ. ಹಾಗಾಗಿ ಅವನ ಹೆಸರಿನ ಜೊತೆಯಲ್ಲಿ ಟೋಪಿಯ ಹೆಸರು ಪ್ರಚಲಿತಕ್ಕೆ ಬಂದಿತು. ಅವನ ಮೂಲ ಹೆಸರು ರಘುನಾಥ . ಮನೆಯವರು ಪ್ರೀತಿಯಿಂದ ತಾತ್ಯಾ ಎಂದು ಕರೆಯುತ್ತಿದ್ದರು. ಮರಾಠಿಯಲ್ಲಿ ಇದು ಅಕ್ಕರೆಯ ಹೆಸರು. ಮನೆಯವರ ಪ್ರೀತಿಯ ತಾತ್ಯಾನಿಗೆ ರಾಜ ನೀಡಿದ ಪ್ರೀತಿಯ ಟೋಪಿ ಹಾಗಾಗಿ ಇವನು ತಾತ್ಯಾಟೋಪೆಯಾದ.

ತಾತ್ಯಾ ಟೋಪೆ ಹುಟ್ಟಿದ್ದು 1814ರಲ್ಲಿ ನಾಚಸಿಕ್ ಜಿಲ್ಲೆಯ ಯೇವಲೆ ಎಂಬ ಊರಿನಲ್ಲಿ.ತಂದೆ ಪಾಂಡುರಂಗ ಪಂತ . ಎಂಟು ಮಕ್ಕಳ ತಂದೆಗ ಎರಡನೆಯವನಾಗಿ ಜನಿಸಿದ ರಘುನಾಥ ಮುಂದೆ ತಾತ್ಯಾ ಟೋಪೆ ಎಂದು ಪ್ರಸಿದ್ಧಿ ಪಡೆದನು.

1818ರಲ್ಲಿ ಮರಾಠಿಗರ ರಾಜ್ಯದ ಆಳ್ವಿಕೆಯ ಕೇಂದ್ರವಾಗಿದ್ದ ಪೂನಾದ ಪೇಶ್ವೆ ಎರಡನೇ ಬಾಜಿರಾಯನ ಆಸ್ಥಾನದಲ್ಲಿ ತಾತ್ಯಾಟೋಪೆಯ ತಂದೆ ಪಾಂಡುರಂಗಪಂತರಿಗೆ ಸನ್ಮಾನದ ಸ್ಥಾನವಿತ್ತು. ಬ್ರಿಟಿಷರ ಕ್ರೂರ ದೃಷ್ಟಿ ಪೇಶ್ವೆಯ ಆಡಳಿತದ ಮೇಲೆ ಬಿತ್ತು.ಮರಾಠಿಗರ ಮೇಲೆ ಯುದ್ಧ ಸಾರಿದ ಬ್ರಿಟಿಷರು ಅಗಾಧ ಸೈನ್ಯಶಕ್ತಿ ಮತ್ತು ಕುಟಿಲತೆಯಿಂದ ಮರಾಠಿಗರನ್ನು ಗೆದ್ದರು. ಸೋತ ಎರಡನೇ ಬಾಜಿರಾಯ ಇಲ್ಲೇ ಇದ್ದರೆ ನಮಗೆ ಎಂದೂ ಅಪಾಯ ತಪ್ಪಿದ್ದಲ್ಲ ಆದ್ದರಿಂದ ದೂರ ಸಾಗಾಕಬೇಕೆಂದು ಅವನಿಗೆ 8 ಲಕ್ಷ ರೂಪಾಯಿ ವಾರ್ಷಿಕ ವೇತನವನ್ನು ನೀಡಿ ಕಾನ್ಪುರದ ಬಳಿಯಲ್ಲಿರುವ ಬ್ರಹ್ಮಾವರ್ತಕ್ಕೆ ಕಳುಹಿಸಿದರು. ಜೊತೆಯಲ್ಲಿ ತಾತ್ಯಾ ಟೋಪೆಯೂ ಹೊರಟನು. ಬಾಜಿರಾಯನ ದತ್ತುಪುತ್ರ ನಾನಾಸಾಹೇಬ ಪೇಶ್ವೆ, ಮಲತಮ್ಮ ರಾವ್ ಸಾಹೇಬ ಮತ್ತು ಕಿರಿಯ ಸಂಗಾತಿ 'ಮನು'(ಮುಂದೆ ಝಾನ್ಸಿರಾಣಿ ಲಕ್ಷ್ಮೀಬಾಯಿ ಆಗುವಳು) ಜೊತೆಯಾಗಿ ಬೆಳೆಯತೊಡಗಿದರು. ಇವರೆಲ್ಲರೂ ಮುಂದೆ ಕ್ರಾಂತಿಕಾರ್ಯಗಳಲ್ಲಿ ತಾತ್ಯಾಟೋಪೆಗೆ ನೆರಳಿನಂತೆ ಬೆಂಗಾವಲಾಗಿದ್ದವರು. ಇವರೆಲ್ಲರಿಗೂ ಜ್ಞಾನಾರ್ಜನೆಯ ಜೊತೆಗೆ ಶಸ್ತ್ರವಿದ್ಯಾರ್ಜನೆಯೂ ಆಯಿತು.ಕತ್ತಿವರಸೆ, ಆನೆ,ಕುದುರೆ ಸವಾರಿ,ಸೈನಿಕ ಶಿಕ್ಷಣವೂ ಆಯಿತು. ತಂದೆಗೆ ಆದ ಅವಮಾನವನ್ನು ಸಹಿಸದ ನಾನಾಸಾಹೇಬ ತಂದೆ ಕೆಳಗಿಟ್ಟಿದ್ದ ಕತ್ತಿಯನ್ನು ಕೈಗೆತ್ತಿಕೊಂಡು ಬ್ರಿಟಿಷರ ವಿರುದ್ಧ ಸೆಡ್ಡು ಹೊಡೆದು ನಿಂತ. ಅವನಿಗೆ ಸೇನಾಪತಿಯಾಗಿದ್ದವನೇ ತಾತ್ಯಾ ಟೋಪೆ. ಬ್ರಿಟಿಷರ ಕಪಿಮುಷ್ಠಿಯಿಂದ ತಾಯಿ ಭಾರತಿಯನ್ನು ಬಿಡಿಸುವ, ಬ್ರಿಟಿಷರ ವಿರುದ್ಧ ಹೋರಾಡುವ ತಂತ್ರಗಾರಿಕೆಯ ಸಮಾಲೋಚನೆ ಪ್ರಾರಂಭವಾಯಿತು.

ದೇಶದ ಸ್ವಾತಂತ್ರ್ಯಕ್ಕೆ ಸಾಮಾನ್ಯ ಜನರನ್ನು ಹೋರಾಟಕ್ಕೆ ಸಜ್ಜು ಮಾಡಿದವರು ಮಹಾತ್ಮ ಗಾಂಧೀಜಿಯಾದರೆ ಕ್ರಾಂತಿಯ ಕಿಡಿಯನ್ನು ಹಚ್ಚಿ ಬ್ರಿಟಿಷರ ವಿರುದ್ಧ ತೊಡೆ ತಟ್ಟಿ ಜನರನ್ನು ಕ್ರಾಂತಿಗೆ ಸಜ್ಜು ಮಾಡಿದವರು ಕ್ರಾಂತಿಕಾರಿಗಳು. ಆ ಪ್ರಮುಖ ಕ್ರಾಂತಿಕಾರಿಗಳಲ್ಲಿ ಪ್ರಮುಖ ತಾತ್ಯಾ ಟೋಪೆ. ಹೋರಾಟ ಮಾಡುವವರ ಸಂಘಟನೆಗೆ ತಾತ್ಯಾ ಹೂಡುವ ಕುಶಲ ಯೋಜನೆಯನ್ನು ಗಮನಿಸೋಣ

***ಕೆಂಪು ಕಮಲದ ಮಹಾಂದೋಲನ* (ಆಪರೇಶನ್ ರೆಡ್ ರೋಸ್)**

ತಾತ್ಯಾ ಟೋಪೆ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ. ಅವನೊಬ್ಬ ಮಹಾಶಕ್ತಿ. ಭಾರತದ ಅಂತಃಶಕ್ತಿಯ ಅರಿವಿದ್ದ ಒಬ್ಬ ಮಹಾ ಸೇನಾನಿ. ಭಾರತಾಂಬೆಯ ದಾಸ್ಯಮುಕ್ತಿಗೆ ಪ್ರಾಣ ಒತ್ತೆ ಇಟ್ಟು ಹೋರಾಡಿದ ಒಬ್ಬ ಮಹಾ ಕ್ಷಾತ್ರ ಬ್ರಾಹ್ಮಣ. ಅಪ್ಪಟ ದೇಶಪ್ರೇಮಿ. ಏನಿದು ಆಪರೇಷನ್ ರೆಡ್ ರೋಸ್ ? ಒಂದು ಕಮಲದಲ್ಲಿ 25 ರಿಂದ 30 ದಳಗಳಿರುತ್ತವೆ.ದಂಟು ಸಮೇತ ಇರುವ ಆ ಕಮಲವನ್ನು ಸಂದೇಶವಾಹಕನೊಬ್ಬ, 25 ರಿಂದ 30 ಸೈನಿಕರು ಇರುವ ತುಕಡಿಯ ಸುಬೇದಾರನಿಗೆ ತಲುಪಿಸುತ್ತಿದ್ದ. ಕೂಡಲೇ ಅವನು ಸೈನಿಕರನ್ನು (ಭಾರತೀಯ ಸೈನಿಕರ ತುಕಡಿ)ಸಾಲಾಗಿ ನಿಲ್ಲಿಸಿ ಮೊದಲನೆಯವನ ಕೈಗೆ ಕಮಲ ನೀಡುತ್ತಿದ್ದ.ಹೀಗೆ ಎಲ್ಲರಿಗೂ ಈ ಪುಷ್ಪ ಹಸ್ತಾಂತರವಾಗುತ್ತಿತ್ತು. ಆಗ ಪ್ರತಿಯೊಬ್ಬರೂ ಒಂದು ದಳವನ್ನು ಕಿತ್ತು ಕೊಳ್ಳುತ್ತಿದ್ದರು ಕೊನೆಯವನು ಖಾಲಿಯಾದ ದಂಟನ್ನು ಸಂದೇಶ ವಾಹಕನಿಗೆ ನೀಡುತ್ತಿದ್ದ. ಅವನು ಅದನ್ನು ತಾತ್ಯಾನಿಗೆ ತಲುಪಿಸುತ್ತಿದ್ದ.ಹೀಗೆ ಸಾವಿರಾರು ಸೈನಿಕರಿಗೆ ಕಮಲದಳ ತಲುಪುತ್ತಿತ್ತು. ಅವರೆಲ್ಲರೂ ಕ್ರಾಂತಿಗೆ ಸಿದ್ದರಿದ್ದಾರೆ ಎಂದರ್ಥ ಮತ್ತು ಸಿದ್ಧರಾದವರ ಸಂಖ್ಯೆಯೂ ತಿಳಿಯುತ್ತಿತ್ತು. ಪತ್ರವಿಲ್ಲದೆ ತಲುಪುತ್ತಿದ್ದ ಈ ನಾಟಿ ಸಂದೇಶ ಕೆಂಪು ಕಮಲ ತಾತ್ಯಾನ ಸಮಯ ಸ್ಫೂರ್ತಿ, ಸಮರಸ್ಫೂರ್ತಿ.

ಬ್ರಿಟಿಷರಿಗೆ ಇದರ ವಾಸನೆ ಹತ್ತಿದರೂ ಇದೇನೋ ಕೆಲಸಕ್ಕೆ ಬಾರದ ಮೂಢನಂಬಿಕೆ ಇರಬೇಕು ಮಾಡಿಕೊಂಡು ಹಾಳಾಗಲಿ ಎಂದು ಸುಮ್ಮನಾಗುತ್ತಿದ್ದರು.

**ಚಪಾತಿಗಳ ನಿಗೂಢ ತಿರುಗಾಟ**

ಊರಿಂದ ಊರಿಗೆ ಸಾಗುವ ಸೈನಿಕರಿಗೆ ಹೊಟ್ಟೆಪಾಡಿನ ವ್ಯವಸ್ಥೆ ಆಗಬೇಕಿತ್ತು.ಅವರು ಸಾಗುವ ದಾರಿಯಲ್ಲಿ ಸಿಗುವ ಹಳ್ಳಿಗಳಿಗೆ ಒಂದಷ್ಟು ಚಪಾತಿ ಮಾಡಿ ಊರಿನ ಪ್ರಮುಖನಿಗೆ ತಲುಪಿಸುವುದು ತಾತ್ಯಾನ ವ್ಯವಸ್ಥೆ. ಆ ಪ್ರಮುಖ ಹಳ್ಳಿಯ ಎಲ್ಲಾ ಮನೆಗಳಿಗೂ ಒಂದೊಂದು ಚೂರು ಚಪಾತಿ ಹಂಚುತ್ತಿದ್ದ.ಅದು ಸೈನಿಕರಿಗೆ ಚಪಾತಿ ಸಿದ್ಧಮಾಡಿ ಎಂಬುದರ ಸಂಕೇತವಾಗಿತ್ತು. ನಂತರ ಸೈನಿಕರಿಗೆ ನೀರು, ಚಪಾತಿ ತಲುಪುತ್ತಿತ್ತು. ಇವೆಲ್ಲ ಗಾಯಿತ್ರಿ ಮಂತ್ರದ ಪಠನದಿಂದ ತಾತ್ಯಾನಿಗೆ ದೊರೆತ ಮೇಧಾಶಕ್ತಿಯ ಫಲ.

**ತಾತ್ಯಾ ಟೋಪೆಯ ಹೋರಾಟದ ತುಣುಕುಗಳು**

ಅನೇಕ ವರ್ಷಗಳಿಂದ ಭಾರತಾಂಬೆಗೆ ಸಂಕೋಲೆ ತೊಡಿಸಿ ಅವಳ ಮಕ್ಕಳಾದ ಭಾರತೀಯರನ್ನು ಗುಲಾಮರನ್ನಾಗಿ ಮಾಡಿಕೊಂಡು ಕ್ರೂರ ಆಡಳಿತ ನಡೆಸುತ್ತಿದ್ದ ಬ್ರಿಟಿಷರ ವಿರುದ್ಧ ಹೋರಾಟದ ಕ್ರಾಂತಿಯ ಹುಯಿಲೆಬ್ಬಿಸಬೇಕೆಂದು 1857ರಲ್ಲಿ ಮೊದಲುಚಿಂತನೆ ಮಾಡಿದವರೇ ನಾನಾಸಾಹೇಬ ಪೇಶ್ವೆ ಮತ್ತು ತಾತ್ಯಾ ಟೋಪೆ. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಟ ಹೂಡಿ ಆ ಕ್ರಾಂತಿಯ ಯಜ್ಞದಲ್ಲಿ ತಮ್ಮ ಸರ್ವಸ್ವವನ್ನೂ ಹೋಮ ಮಾಡಲು ಜನಮನ ಸಿದ್ಧ ಮಾಡುವುದು ಇವರ ಚಿಂತನೆಯಾಗಿತ್ತು. ಬ್ರಿಟಿಷರ ಸಾಮ್ರಾಜ್ಯಕ್ಕೆ ಆಧಾರವೆ ಭಾರತೀಯ ಸೇನೆ ಅವರ ಅಂತಃಕರಣದಲ್ಲಿ ದೇಶಭಕ್ತಿಯ ಹೊನಲು ಹರಿಸಿ ಬ್ರಿಟಿಷರು ಹೇಳಿದವರಿಗೆ ಗುಂಡು ಹಾರಿಸುತ್ತಿದ್ದ ಅದೇ ಸೈನಿಕರು ಬ್ರಿಟಿಷರ ಗುಂಡಿಗೆಗೆ ಗುಂಡು ಹಾರಿಸುವ ಅದೇ ಸೈನಿಕರಿಗೆ ಕಿಚ್ಚನ್ನು ಹಚ್ಚಿದ್ದು ಈ ಇಬ್ಬರು ನಾಯಕರೇ. ಮರಾಠಾಕ್ಷತ್ರಿಯನೊಬ್ಬ,ಕ್ಷಾತ್ರ ತೇಜದ ಬ್ರಾಹ್ಮಣ ನೊಬ್ಬ ಇಬ್ಬರೂ ಒಡಗೂಡಿ ಇಡೀ ಬ್ರಿಟಿಷರ ತೊಡೆ ನಡುಗಿಸಿದರು.

ಅವರ ಯೋಜನೆಯಂತೆ ಇಡೀ ದೇಶದಲ್ಲಿ ಒಂದೇ ದಿನ ಕ್ರಾಂತಿ ಶುರುವಾಗಬೇಕು ಎಂದು 1857 ಮೇ 31ರ ಮುಹೂರ್ತ ನಿಶ್ಚಯ ವಾಗಿತ್ತು. ಆದರೆ ಸೈನ್ಯದ ತುಕಡಿಯಲ್ಲಿದ್ದು ಆತುರವಾಗಿ ಬ್ರಿಟಿಷರ ಮೇಲೆ ಗುಂಡು ಹಾರಿಸಿ ಕ್ರಾಂತಿಯ ಮೊದಲ ಕಿಡಿ ಹಚ್ಚಿದವನೇ ಬ್ರಾಹ್ಮಣ ಮಂಗಳ ಪಾಂಡೆ. ಆದರೂ ಯೋಜನೆಯಂತೆ ದೇಶದಲ್ಲಿರುವ ಎಲ್ಲಾ ಭಾರತೀಯರ ಮತ್ತು ಬ್ರಿಟಿಷ್ ಸೈನ್ಯದಲ್ಲಿರುವ ಭಾರತೀಯ ಸೈನಿಕರ ಸಂಘಟನೆ ಶುರುವಾಯಿತು.

1857 ಮೇ 10ರಂದು ಮೀರತ್ ನಲ್ಲಿ "ಮಾರೋ ಫಿರಂಗಿ ಕೋ"ಎಂಬ ಘೋಷಣೆ ಮೊಳಗಿತು. ಮೀರತ್ ಅನ್ನು ವಶಪಡಿಸಿ ಕೊಂಡೇ ಬಿಟ್ಟರು. ಮಾತ್ರವಲ್ಲ ರಾತ್ರಿಯೆಲ್ಲ ನಡೆದು 36 ಮೈಲಿ ದೂರದಲ್ಲಿದ್ದ ದೆಹಲಿಯ ಮೇಲೆ ಆಕ್ರಮಣ ಮಾಡಿ ದೆಹಲಿಯನ್ನೂ ವಶಪಡಿಸಿಕೊಂಡರು. ಬಹದ್ದೂರ್ ಶಹನನ್ನು ತಮ್ಮ ಮುಂದಾಳೆಂದರು. ನಾನಾ ಮತ್ತು ತಾತ್ಯಾ ಯೋಜನೆಯಂತೆ ಅವರ ನೇತೃತ್ವದಲ್ಲೇ ಕಾನ್ಪುರದ ಸೈನಿಕರನ್ನು ಹುರಿದುಂಬಿಸಿದರು. ಜೂನ್ 4 ಮಧ್ಯರಾತ್ರಿ ಕಾನ್ಪುರದಲ್ಲಿ ಸೈನಿಕರು ಬಂಡೆದ್ದರು.ಘನ ಘೋರ ಯುದ್ಧವಾಯಿತು. ಪೇಶ್ವೆ ಮತ್ತು ತಾತ್ಯಾ ಗೆದ್ದು ಕಾನ್ಪುರವನ್ನು ವಶಪಡಿಸಿಕೊಂಡರು.ಇದಾದ ನಂತರ ತಾತ್ಯಾನ ಕಣ್ಣು ಶಿವರಾಜಪುರದ ಮಿಲಿಟರಿಯ ಕೇಂದ್ರದ ಕಡೆ ಬಿತ್ತು. ಅಲ್ಲಿ ಬಂಡೆದ್ದ ಸೈನ್ಯಪಡೆಯನ್ನು ವಶಕ್ಕೆಪಡೆದನು. ನಂತರ ಕಾನ್ಪುರದಿಂದ 45 ಮೈಲಿ ದೂರವಿರುವ ಕಾಲ್ಪಿ ಮತ್ತು ಅದರ ಭದ್ರವಾದ ಕೋಟೆ ಗೆ ಬಂದು ಇಳಿದ ತಾತ್ಯಾ ನೋಡ ನೋಡುತ್ತಿದ್ದಂತೆ ಗೆದ್ದುಕೊಂಡೇ ಬಿಟ್ಟ. ಅದನ್ನು ಭದ್ರಪಡಿಸಿ ಕ್ರಾಂತಿಕಾರಿಗಳ ಕೇಂದ್ರವನ್ನಾಗಿ ಮಾಡಿ ಶಸ್ತ್ರಷಸ್ತ್ರ ತಯಾರಿ, ಸಮರಾಭ್ಯಾಸದ ಪ್ರಮುಖ ಸ್ಥಳವನ್ನಾಗಿ ಮಾರ್ಪಡಿಸಿದ. ಕಾಲಾನಂತರ ಬ್ರಿಟಿಷರು ಮತ್ತೆ ಕಾಲ್ಪಿಯನ್ನು ವಶಪಡಿಸಿಕೊಂಡರು. ಎದೆಗುಂದದ ತಾತ್ಯಾ ಇದ್ದ ಸೈನ್ಯಕರೊಡಗೂಡಿ ಗ್ವಾಲಿಯರ್ ಕಡೆ ನಡೆದು ಅಲ್ಲಿಯ ಶಿಂದೆ ರಾಜನ ಬಗ್ಗೆ ಅಸಂತೋಷದಿಂದಿದ್ದ ಸೈನಿಕರೊಂದಿಗೆ ಸ್ನೇಹ ಬೆಳೆಸಿ ಯುದ್ಧ ಮಾಡಿ ಗ್ವಾಲಿಯರ್ ಗೆದ್ದ. ಝಾನ್ಸಿಯ ಯುದ್ಧದಲ್ಲಿ ಲಕ್ಷ್ಮೀಬಾಯಿಗೆ ಸಹಾಯ ಮಾಡಲು ಸೈನ್ಯದೊಂದಿಗೆ ಬಂದು ಕಾದಾಡಿದ.

ಇಷ್ಟೆಲ್ಲಾ ಸಾಹಸದೊಂದಿಗೆ ಹೋರಾಡಿದರೂ ಕ್ರಮೇಣ ಗೆದ್ದ ಎಲ್ಲಾ ಪ್ರದೇಶಗಳು ಆಂಗ್ಲರ ವಶವಾಯಿತು. ಕ್ರಾಂತಿಕಾರಿಗಳೆಲ್ಲ ಅಡಗಿದರು. ಸೈನಿಕರೆಲ್ಲ ಕರಗಿದರು. ತಾತ್ಯಾ ಟೋಪೆ ಒಂಟಿಯಾದ. ತನ್ನ ವಿಜಯದ ಆಸೆ ಮುರುಟಿ ಹೋಗಿ ಸೋಲು ಖಚಿತ ಎಂದು ತಿಳಿಯಿತು. ಆದರೂ ಆಂಗ್ಲರ ಮುಂದೆ ದಯಾ ದಾನಕ್ಕೆ ಕೈ ಒಡ್ಡಲಿಲ್ಲ. ಬ್ರಿಟಿಷರ ಕಣ್ಗಾವಲಿಗೆ ಚಳ್ಳೆಹಣ್ಣು ತಿನ್ನಿಸಿ ಊರಿಂದ ಊರಿಗೆ ಸ್ಥಳ ಬದಲಾವಣೆ ಮಾಡುತ್ತಾ ಮಾಯವಾಗುತ್ತಿದ್ದ. ನಂಬಿದವರೆಲ್ಲ ಮೋಸ ಮಾಡಿದರು. ಅಸಹಾಯಕ ನಾದ ತಾತ್ಯಾಟೋಪೆ. ಬ್ರಿಟಿಷರ ವಿರುದ್ಧ ಸಿಡಿದೆದ್ದ ಕ್ರಾಂತಿಯ ಕಿಡಿಗಳೆಲ್ಲ ತಣ್ಣಗಾಗಿತ್ತು. ಉಳಿದದ್ದು ಒಂದೇ ಕಿಡಿ ಅದೇ ತಾತ್ಯಾ ಟೋಪೆ. ಆಂಗ್ಲರ ವಿರುದ್ಧ ಒಟ್ಟು 150 ಕದನಗಳನ್ನು ಮಾಡಿದ್ದನು. ಸಾವಿರಾರು ಸೈನಿಕರನ್ನೂ, ಹೆಸರಾಂತ ಆಂಗ್ಲ ಸೈನ್ಯ ಮುಂದಾಳುಗಳನ್ನು ಸಂಹರಿಸಿ ಇಂಗ್ಲೀಷರಿಗೆ ಸೈತಾನನಾಗಿದ್ದನು. ದಿಕ್ಕುಕೆಟ್ಟವನಂತೆ ಅಲೆದು ಅಲೆದು ಬಸವಳಿದ ತಾತ್ಯಾನಿಗೆ ಆಶ್ರಯಬೇಕಾಗಿತ್ತು. ಗ್ವಾಲಿಯರ್ ಕದನದಲ್ಲಿ ಸ್ನೇಹಿತನಾಗಿದ್ದ ಮಾನ್ ಸಿಂಗನ ಹತ್ತಿರ ಆಶ್ರಯ ಕೇಳಿದ. ಆಂಗ್ಲರಿಗೆ ತಿಳಿಯದಂತೆ ಮಾನ್ ಸಿಂಗ್ ಒಂದು ಕಾಡಿನ ಮಧ್ಯೆ ವ್ಯವಸ್ಥೆ ಮಾಡಿದ.ತಾತ್ಯಾ ಮಾನಸಿಂಗನ ಆಶ್ರಯದಲ್ಲಿದ್ದಾನೆ ಎಂಬ ಸುಳಿವು ಬ್ರಿಟಿಷರಿಗೆ ಸಿಕ್ಕಿತು. ಒಂದು ಸಂಸ್ಥಾನವನ್ನು ಬಳುವಳಿಯಾಗಿ ಕೊಡುತ್ತೆನೆಂಬ ಆಸೆ ತೋರಿಸಿದರು. ನಮ್ಮ ದೇಶದ ದೌರ್ಭಾಗ್ಯ, ದ್ರೋಣರು ವೀರ ಅಭಿಮನ್ಯುವನ್ನು ಚಕ್ರವ್ಯೂಹದಲ್ಲಿ ಸಿಲುಕಿಸಿ ಕೊಂದರು, ಪೃಥ್ವಿರಾಜ ಚೌಹಾಣರನ್ನು ಅವರ ಸಹವರ್ತಿಯೊಬ್ಬ ಶತ್ರುವಿಗೆ ಹಿಡಿದು ಕೊಟ್ಟ ಮತ್ತು ಕಿತ್ತೂರು ಚೆನ್ನಮ್ಮನಿಗೆ ಮೋಸ ಮಾಡಿದ ಮಲ್ಲಪ್ಪ ಶೆಟ್ಟಿ, ಈ ರೀತಿ ಸ್ವಜನ ದ್ರೋಹಿಗಳ ಕೆಟ್ಟ ರಕ್ತ ಮಾನಸಿಂಗನಲ್ಲೂ ಹರಿದು ಆಂಗ್ಲರ ಸೈನಿಕರನ್ನು ಕರೆತಂದು ನಿದ್ರಿಸುತ್ತಿದ್ದ ತಾತ್ಯಾಟೋಪೆಯನ್ನು ಸೆರೆಹಿಡಿಸಿದ. ಕಣ್ಣು ಬಿಡುವ ಮೊದಲೇ ಕೈಕಾಲಿಗೆ ಬೇಡಿ ಬಿದ್ದಿದ್ದವು. "ತಾಯಿ ಭಾರತಿಯ ಬಂಧ ವಿಮೋಚನೆಗೆ ಹೋರಾಡಿದ ಸಮಯದಲ್ಲಿ ಯಾವ ನಿರಪರಾಧಿಯ ನೆತ್ತರನ್ನೂ ನಾನು ಹರಿಸಿಲ್ಲ, ಹಾಗಾಗಿ ನಿಮ್ಮ ನ್ಯಾಯ ನನಗೆ ಬೇಕಿಲ್ಲ ನನ್ನನ್ನು ತೋಪಿನ ಬಾಯಿಗೆ ಕಟ್ಟಿ ತುಂಡು ತುಂಡು ಮಾಡಿ, ಇಲ್ಲ ಗಲ್ಲುಗಂಬಕ್ಕೆ ಏರಿಸಿ ನೇಣು ಹಾಕಿ,"ಇದು ಪುಳುಚಾರು ತಿನ್ನುವ ತಾತ್ಯಾನ ಬಾಯಿಂದ ಬಂದ ಸಿಂಹ ಘರ್ಜನೆ. 1859 ಏಪ್ರಿಲ್ 7 ರಂದು ಮಧ್ಯರಾತ್ರಿ ಆ ಪುಣ್ಯ ಪ್ರತಾಪಿ ಪುರುಷ ಸಿಂಹನನ್ನು ಗಲ್ಲಿಗೇರಿಸಿದರು.

**ಹೀಗೆ ತಾಯಿ ಭಾರತಿಯ ಪಾದಪದ್ಮಗಳಲ್ಲಿ ದೇಶಭಕ್ತಿಯ ಪುಷ್ಪ ವೊಂದು ಅರ್ಪಣೆಯಾಯಿತು**

**ಭಾರತ್ ಮಾತಾ ಕೀ ಜೈ**

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ :ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

ಈ ಹಿಂದೆ ವಿಧಿ ಮತ್ತು ಪುರುಷಕಾರ ಎಂಬ ವಿಷಯವಾಗಿ ಹಲವು ಮುಖದ ಚಿಂತನೆಗಳನ್ನು ಅನುಸಂಧಾನ ಮಾಡಿದ್ದೇವೆ. ಈ ವಿಷಯವಾಗಿ ಭಾರತದಲ್ಲಿ ವಿಶೇಷ ಚಿಂತನೆಗಳು ನಡೆದಿರುವಂತೆ ವಿಭಿನ್ನ ದೇಶಗಳಲ್ಲಿ ಬುದ್ಧಿಜೀವಿಗಳ ವಿಮರ್ಶಕರ ಚಿಂತನ ವಿಧಾನಗಳು ಹಲವು ಬಗೆಯಲ್ಲಿ ಕಾಲ ಕಾಲದಲ್ಲಿ ಹೊರಹೊಮ್ಮಿವೆಯೆಂಬುದರಲ್ಲಿ ಸಂಶಯವಿಲ್ಲ. ಮಾನವನಿಗೆ ಹಲವು ಮುಖದ ಬುದ್ಧಿಯ ಹರಿವೆ ಪ್ರಕೃತಿ, ಸಂಸ್ಕಾರ, ದೇಶ, ಕಾಲ, ಅನುಭವಗಳಿಗೆ ತಕ್ಕಂತೆ ಸಹಜವಾಗಿಯೇಇದೆ. ಅಂತಹ ಹರಿವೆಗಳಲ್ಲಿ ಸತ್ಯಕ್ಕೆ ಸಂಗತವಾದಚಿಂತನೆಯ ಲಹರಿಗಳು ತಾರತಮ್ಯದಿಂದಎಲ್ಲಿ ಬೇಕಾದರೂಗೋಚರಿಸಬಹುದು. ಸತ್ಯಕ್ಕೆ ಸಂಗತವಾಗಿದ್ದಾಗ ಅವುಗಳೆಲ್ಲವೂ ಮಾನ್ಯವೇ ಆಗಿರುತ್ತವೆ. ಆದರೆ ಅಂತಹ ಎಲ್ಲ ಚಿಂತನೆಗಳನ್ನು ಅನುಸಂಧಾನ ಮಾಡುವ ಅವಶ್ಯಕತೆಯೂ ಇಲ್ಲ ಮತ್ತುಅದು ಸಾಧ್ಯವೂ ಅಲ್ಲ. ಈ ವಿಷಯದಲ್ಲಿ ಪ್ರಧಾನವಾದ ಮುಖಗಳನ್ನು ಒಂದು ರೀತಿಯಲ್ಲಿ ಅನುಸಂಧಾನ ಮಾಡಿರುವುದರಿಂದ ಅದರ ಮುಂದುವರಿಕೆಯಾಗಿ ಪರಸ್ಪರ ವಿರೋಧವಿಲ್ಲದ ಆರ್ಷದೃಷ್ಟಿಯಿಂದಕಂಡೊರೆವ ಸತ್ಯಾರ್ಥಗಳ ಬಗ್ಗೆ ಒಂದು ಪರಿಚಯವನ್ನು ಪಡೆಯುವ ದೃಷ್ಟಿಯಿಂದ ಈ ಲೇಖನವನ್ನು ಮುಂದುವರಿಸಲಾಗಿದೆ.

ಈ ಪ್ರಕೃತಿಮಂಡಲದಲ್ಲಿ ಅದರ ಸಹಜ ಸೌಂದರ್ಯವಾಗಿ ತಂಪಾದ ತಿಳಿನೀರಿನ ಪ್ರಶಾಂತವಾದ ನೀರಿನಾಸರೆಗಳಿರುವುದುಂಟು. ಕನ್ನಡಿಯಂತೆ ಪರಿಶುದ್ಧವಾಗಿ ಯಾವುದೇ ಅಲೆಗಳ ಅಬ್ಬರವಿಲ್ಲದೆ ಸ್ತಬ್ಧವಾಗಿರುವ ಆ ನೀರಿನ ಆಕರದ ಮಧ್ಯದಲ್ಲಿ ಒಂದು ಸಣ್ಣ ಎಲೆ ಬಿದ್ದರೆ ಏನಾಗಬಹುದು? ನೀರಿನ ಆಕರದಲ್ಲಿ ವೃತ್ತಾಕಾರವಾದ ಅಲೆಗಳು ಆರಂಭಗೊಳ್ಳುವುವು. ಒಂದರಿಂದ ಮತ್ತೊಂದುಒಂದರಅನಂತರ ಮತ್ತೊಂದುಎಂಬಂತೆ ಹಲವು ಹಂತಗಳ ತರಂಗಗಳು ಏರ್ಪಡುತ್ತವೆ. ತರಂಗಗಳು ಅಂಚಿನವರೆಗೂ ವ್ಯಾಪಿಸುವುವು. ಅಂಚಿನಲ್ಲಿ ನಿಂತುತರಂಗವನ್ನು ಮಾತ್ರ ವೀಕ್ಷಿಸುವವನಿಗೆ ಸಿಗುವ ನೋಟವೊಂದು. ಅವನು ಈ ತರಂಗಗಳು ಆರಂಭವಾಗಲು ಹಿನ್ನೆಲೆಯಲ್ಲಿರುವ ಕಾರಣಗಳನ್ನು ಕಾಣಲಾರ. ಮುಂದೆ ಮುಂದೆ ಸರಿದುಬರುತ್ತಿರುವ ಅಲೆಗಳನ್ನು ನೋಡಿ ಅವನು ಸೋಜಿಗಪಡಬಹುದು. ಕಾರಣವನ್ನು ಹುಡುಕಿದರೂಕಾಣದಕಾರಣ ಭ್ರಾಂತಿ ಪಡಬಹುದು. ಸಂದೇಹ ವ್ಯಕ್ತಪಡಿಸಬಹುದು. ಆದರೆ ಮತ್ತೊಬ್ಬನು ಎಲೆಯು ಬೀಳುತ್ತಿರುವುದನ್ನು ನೋಡಿ ಅದರಿಂದ ಆರಂಭಗೊಂಡ ಅಲೆಯನ್ನು ಮತ್ತು ಅದರ ಪರಂಪರೆಯನ್ನು ಗಮನಿಸಿ ಒಂದು ನಿರ್ಣಯಕ್ಕೆ ಬರುತ್ತಾನೆ. ಅವನ ನೋಟವೇ ಬೇರೆ. ಅವನು ಕಾರ್ಯಕಾರಣ ಭಾವವನ್ನು ಅರಿತುಕೊಳ್ಳಬಲ್ಲ. ಅವನ ದೃಷ್ಟಿಯಿಂದ ಆಕರದ ಅಂಚಿನಲ್ಲಿಗೋಚರಿಸುವ ಅಲೆಗೂ ಮೂಲದಲ್ಲಿ ಒಂದು ಕ್ರಿಯೆಯಾಗಿ ಕಾರಣವಾಗಿರುತ್ತೆ. ಹೀಗೆ ಅವನ ಬುದ್ಧಿಯುಕಾರಣ ಮತ್ತು ಅದರಿಂದಾಗುವ ಕಾರ್ಯದ ವ್ಯವಸ್ಥೆಯನ್ನು ಯಥಾರ್ಥವಾಗಿ

**–ಡಾ। ಕೆ. ಎಲ್ ಶಂಕರನಾರಾಯಣಜೋಯ್ಸ್**

ಭಾವಿಸುತ್ತ ಅಂಚಿನಲ್ಲೇ ನಿಂತು ಏಕದೇಶವನ್ನಷ್ಟೇ ಗಮನಿಸುವವನಿಗೆ ಈ ಜ್ಞಾನವಿರುವುದಿಲ್ಲ. ಅದೇರೀತಿ ಜೀವನದ ಹೊರವಲಯವಾದ ಇಂದ್ರಿಯ ಭೂಮಿಕೆಯಲ್ಲಿ ನಿಂತು ಚಿಂತಿಸುವವನ ಸ್ಥಿತಿಯೂ ಸಹ. ಅವನಿಗೆ ಸಮಗ್ರಜ್ಞಾನವಿರುವುದಿಲ್ಲ. ಅವನ ಸತ್ಯಶೋಧನೆ ಅಸಮಗ್ರವಾಗಿರುವುದು. ಯಾವುದೇ ಜೀವನದ ಆಗುಹೋಗುಗಳಿಗೆ ಕಾರಣವೇನು? ಎಂದು ಚಿಂತಿಸುವಾಗ ಜೀವನವನ್ನು ಎಷ್ಟು ದೂರದವರೆಗೆ ನೋಡಬಲ್ಲನು? ಎಂಬುದು ಪ್ರಧಾನವಾಗಿದೆ. ಜೀವನವನ್ನು ಸಮಗ್ರವಾಗಿ ನೋಡಿ ನಿರ್ಣಯಿಸುವವನ ತೀರ್ಮಾನವೇ ಸರಿಯಾದ ತೀರ್ಮಾನವಾಗಬಲ್ಲದು. ಏಕದೇಶವನ್ನಷ್ಟೇ ನೋಡಿ ನಿರ್ಣಯಿಸುವವನ ತೀರ್ಮಾನರಂಜಕವಾಗಿ ಕಂಡರೂ ಸಹ ಎಂದೆಂದಿಗೂ ನಿಲ್ಲುವತೀರ್ಮಾನವಾಗುವುದಿಲ್ಲ. ತೀರವನ್ನು ಮುಟ್ಟಿಸುವ ಮಾನವಾಗುವುದಿಲ್ಲ. ಆದ್ದರಿಂದ ವಿಧಿ ಮತ್ತು ಪುರುಷಕಾರಗಳ ಬಗ್ಗೆಯೂ ಸಹ ಆರ್ಷವಾದದೃಷ್ಟಿಕೋಣದಿಂದ ಸತ್ಯವನ್ನುಕಂಡರಿತವರು ನೀಡಿದ ವಿಷಯವನ್ನೇ ಸತ್ಯಾರ್ಥವಾಗಿ ತೆಗೆದುಕೊಳ್ಳಬೇಕಾಗುತ್ತದೆ.

ಮೇಲಿನ ಉದಾಹರಣೆಯಲ್ಲಿ ಗಮನಿಸಬೇಕಾದ ವಿಷಯವೊಂದಿದೆ. ಅಂಚಿನಲ್ಲಿ ನಿಂತವನುತರಂಗವುಂಟಾಗಿರಲು ಕಾರಣ ತೋರದೆ ಅದನ್ನು ವಿಧಿ ಎಂದು ಭಾವಿಸಿ ಸಂತೃಪ್ತನಾಗಬಹುದು. ಕಾರಣವನ್ನು ಕಂಡವನು ಎಲೆ ಬಿದ್ದ ಪರಿಣಾಮವಾಗಿ ಹೀಗೆಲ್ಲ ಆಗಿರುವುದರಿಂದ ಅದು ಕ್ರಿಯೆ ಪ್ರತಿಕ್ರಿಯೆಗಳ ಪರಂಪರೆಯೆಂದು ಭಾವಿಸುತ್ತಾನೆ. ಅವನ ದೃಷ್ಟಿಯಿಂದ ಇವೆಲ್ಲವೂ ಪುರುಷ ಪ್ರಯತ್ನದ ಪಾಲಿಗೆ ಸೇರುತ್ತದೆ. ಹೀಗೆ ಒಂದೇ ಘಟನೆ ಇಬ್ಬರಿಗೆ ಎರಡು ರೀತಿಯ ನಿರ್ಣಯಕ್ಕೆ ಎಡೆ ನೀಡುವುದು.

ಬ್ರಹ್ಮವನ್ನು ವಿಧಾತಾ, ವಿಧಿ ಎಂದು ಕರೆದಿರುವುದುಂಟು. 'ಧಾತಾಯಥಾ ಪೂರ್ವಮಕಲ್ಪಯತ್'ಎಂಬಂತೆಒಂದು ಸೂತ್ರವನ್ನು ಅನುಸರಿಸಿ ಹಿಂದಿನಂತೆಯೇ ಮತ್ತೊಮ್ಮೆ ಸೃಷ್ಟಿ ಮಾಡುತ್ತಾನೆ. ಅವನ ಸೃಷ್ಟಿಯಲ್ಲಿ ಒಂದು ಮೂಲಸೂತ್ರವಿದೆ. ಆ ಸೂತ್ರವೇಧಾರಣೆಗೆ ಕಾರಣವಾಗಿದೆ. ಅವನನ್ನು ವಿಧಿಯೆಂದು ಕರೆದಿರುವುದನ್ನು ಗಮನಿಸಬೇಕು. ಶಾಸನವು ವಿಧಿಯೆನ್ನಿಸಿಕೊಳ್ಳುತ್ತೆ. ಶಾಸನವನ್ನೇ ಅನುಸರಿಸಿ ಸೃಷ್ಟಿ ಮಾಡುವವನಾದ್ದರಿಂದ ಶಾಸಕನನ್ನೂ ವಿಧಿಯೆಂದೇ ಹೆಸರಿಸಿದ್ದಾರೆ. ಆದ್ದರಿಂದ ಸೃಷ್ಟಿಯೆಲ್ಲವೂ ಒಂದು ನಿಯಮಕ್ಕೆ ಬದ್ಧವಾಗಿದೆ.

ವಿಧಾತೃವಿನ ಆಶಯದಂತೆ ಒಂದು ಕ್ರಿಯೆ ನಡೆಯುವುದಾದರೆ ಜ್ಞಾನ–ಇಚ್ಛಾ–ಕ್ರಿಯೆಗಳ ಒಂದು ಸಾಮರಸ್ಯ ವಿರುತ್ತೆ. ಅದೆಲ್ಲವೂ ವಿಧಿ. ಈ ಸಾಮರಸ್ಯವಿಲ್ಲದ 'ಕ್ರಿಯೆ ನಡೆಯುವುದಾದರೆ ಅದುದುರ್ವಿಧಿ. ಪುರುಷಪ್ರಯತ್ನ ರೂಪವಾದ ಕ್ರಿಯೆಯು ಜ್ಞಾನೇಚ್ಛೆಗಳ

ಮುಂದುವರಿಕೆಯಾಗಿ ಬಂದಿರುವ ಪಕ್ಷೆ **'ಸರ್ವಂಕರ್ಮಾಖಿಲಂಪಾರ್ಥ ಜ್ಞಾನೇಪರಿಸಮಾಪ್ಯತೇ'**ಎಂದು ಗೀತಾಚಾರ್ಯನು ಆದೇಶಿಸಿರುವಂತೆ ಅದು ಜ್ಞಾನದಲ್ಲೇ ಪರಿಸಮಾಪ್ತಿಯನ್ನು ಹೊಂದುತ್ತಾ ಸಮರಸಭಾವಕ್ಕೆ ದಾರಿ ಮಾಡುತ್ತೆ. ಅದಿಲ್ಲದೆ ಪುರುಷಪ್ರಯತ್ನವು ಜ್ಞಾನೇಚ್ಛುಗಳ ಮುಂದುವರಿಕೆಯಾದ ಕ್ರಿಯಾರೂಪವಾಗಿರದೇ ಇದ್ದರೆ ಅದು ಜ್ಞಾನದಲ್ಲಿ ಪರ್ಯವಸಾನವನ್ನು ಹೊಂದದೆಅಜ್ಞಾನದಲ್ಲೂ ಬಂಧನದಲ್ಲೂ ಮುಕ್ತಾಯ ಹೊಂದುವುದಾಗಿದೆ. ಅದುದುರ್ವಿಧಿ. ಬ್ರಹ್ಮನ ಶಾಸನಕ್ಕೆ ವಿರುದ್ಧವಾದ ನಡೆ.

ಬ್ರಹ್ಮನ ಶಾಸನವನ್ನು ಅನುಸರಿಸಿ ನಡೆದಾಗ, ಸೌಖ್ಯ. ಮೀರಿದಾಗ ಅಸೌಖ್ಯ. ಎಂದರೆ ಯಾವುದೇ ಅಸೌಖ್ಯವಿರುವುಸಾದರೂ ಅದರ ಹಿಂದೆ ಬ್ರಹ್ಮನ ಶಾಸನವನ್ನೂ ಮೀರಿ ನಡೆಸಿದ ಪುರುಷ ಪ್ರಯತ್ನವು ಕಾರಣವಾಗಿರುತ್ತೆ. ಈ ಹಿನ್ನೆಲೆಯಲ್ಲಿ **'ಮಾಡಿದ್ದುಣ್ಣೋಮಹಾರಾಯ'** ಎಂಬ ನಾಣ್ಣುಡಿ ಬಂದಿದೆ. **'ಅವಶ್ಯಮೇವಭೋಕ್ತವ್ಯಂಕೃತಂಶುಭಾಶುಭಂ'** ತಾನು ಮಾಡಿದ ಶುಭ ಮತ್ತುಅಶುಭ ಕರ್ಮಗಳ ಫಲವನ್ನು ತಾನು ಅನುಭವಿಸಲೇಬೇಕು. **'ಪ್ರಾರಬ್ಧಂತ್ವಿಹ ಭುಜ್ಯತಾಂ'** ಫಲ ಕೊಡಲು ಆರಂಭವಾಗಿರುವ ಕರ್ಮಗಳ ಫಲವನ್ನು ಅನುಭವಿಸು ಎಂಬ ಮಾತುಗಳು ಬಂದಿದೆ.

ಜೀವನ ಎಂದೊಡನೆ ನಮ್ಮ ಬುದ್ಧಿಗೆ ಗೋಚರಿಸುವುದು ಹುಟ್ಟು ಸಾವುಗಳ ನಡುವಿನ ಅವಧಿಯಾಗಿದೆ. ಆದರೆ ಇದಷ್ಟೇ ಜೀವನವೇ? ಕೇವಲ ಬಾಹ್ಯ ಚಕ್ಷುಸ್ಸಿನಿಂದ ನೋಡಿದರೆ ಅಷ್ಟೇ ಜೀವನವೆಂದು ಹೇಳಬೇಕಾಗುತ್ತದೆ. ಕಾರಣ ಹುಟ್ಟಿನ ಹಿಂದಿನ ಸಂದರ್ಭವಾಗಲೀ ಸಾವಿನ ಅನಂತರದ ಸಂದರ್ಭವಾಗಲೀ ಯಾವುದೂ ನಮ್ಮ ಕಣ್ಣಿಗೆ ಗೋಚರಿಸುವುದಿಲ್ಲ. ಆದರೆ ನಮ್ಮ ಕಣ್ಣಿಗೆ ಗೋಚರಿಸಲಿಲ್ಲವೆಂಬಷ್ಟೇ ಕಾರಣಕ್ಕೆ ಇಲ್ಲವೆಂದು ನಿರ್ಣಯಿಸಲಾಗುವುದಿಲ್ಲ. ಬಾಹ್ಯವಾದ ಕಣ್ಣಿಗೆ ಕಾಣದ ಅನೇಕ ಸೂಕ್ಷ್ಮವಾದ ಜೀವಗಳು ಸೂಕ್ಷ್ಮದರ್ಶಕಕ್ಕೆ ಗೋಚರಿಸುವುದುಂಟಷ್ಟೆ. ಅವುಗಳನ್ನು ಒಪ್ಪಿಕೊಳ್ಳುವುದಿಲ್ಲವೇ? ಇದಲ್ಲದೇ ಆ ಸೂಕ್ಷ್ಮದರ್ಶಕಕ್ಕೂ ತೋರದ ಸತ್ಯಗಳು ಸೃಷ್ಟಿಯಲ್ಲಿರ ಬಾರದೇ? ಅಂತಹ ಸತ್ಯಗಳನ್ನು ಯೋಗದ ದೃಷ್ಟಿಯಿಂದ ಕಂಡುಕೊಳ್ಳಲು ಸಾಧ್ಯವೆಂದು ಸನಾತನಭಾರತೀಯ ಮಹರ್ಷಿಗಳ ಆಶಯವಾಗಿದೆ. ಅವರ ದೃಷ್ಟಿಯು ಕಂಡ ಸತ್ಯವೇನೆಂದರೆ ಭಗವಂತನಿಂದ ಬೇರೆಯಾದ ಕ್ಷಣದಿಂದ ಆರಂಭಿಸಿ ಮತ್ತೆ ಭಗವಂತ ನಲ್ಲಿ ಹೋಗಿ ಸೇರುವವವರೆಗಿನಒಟ್ಟುಅವಧಿ ಜೀವನವೆನ್ನಿಸಿಕೊಳ್ಳುತ್ತದೆ. 'ಜೀವ' ಎಂಬ ಹೆಸರು ಎಲ್ಲಿಂದ ಎಲ್ಲಿಯವರೆಗೆ ಇರಬಹುದೋ ಅಲ್ಲಿಂದ ಅಲ್ಲಿಯವರೆಗಿನ ಅವಧಿಯಷ್ಟೂ ಜೀವನದ ವ್ಯಾಪ್ತಿಗೆ ಸೇರಿದೆ. ಹೀಗಿರುವುದರಿಂದ ಇಷ್ಟು ದೀರ್ಘವಾದ ಅವಧಿಯನ್ನು ಮನಸ್ಸಿನಲ್ಲಿಟ್ಟು ಕೊಂಡು ಜೀವನದ ಘಟನಾವಳಿಗಳನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ.

ಮುಂದುವರೆಯುವುದು)


ಅಕ್ಷಯ ವಿಪ್ರ ಮಹಾಸಭಾ (ರಿ)

ನಂ. 13-1, 12ನೇ ಅಡ್ಡರಸ್ತೆ, ಜೆ.ಪಿ.ನಗರ, 1ನೇ ಹಂತ, ಸಾರಕ್ಕಿ,
ಇಂದಿರಾಗಾಂಧಿ ಸರ್ಕಲ್ ಹತ್ತಿರ, ಬೆಂಗಳೂರು - 560 078.

E.mail : avms3617@gmail.com Website : akshayavipra.in

ತ್ರಿಮತಸ್ಥ ಬ್ರಾಹ್ಮಣ ವಧುವರಾನ್ವೇಷಣ ಸಮಾವೇಶ

ದಿನಾಂಕ : 26-02-2023ನೇ ಭಾನುವಾರ

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 1-30ರವರೆಗೆ



ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿ ಮಠ

ಪೂರ್ಣಪ್ರಜ್ಞಾ ಲೇಔಟ್, ಬೆಂಗಳೂರು - 560 061



ಪೋಷಕರು ಹಾಗೂ ವಧೂ-ವರರಿಗೆ ನೇರವಾಗಿ ಸಂಪರ್ಕಿಸಲು ಇದೊಂದು ಸುವರ್ಣಾವಕಾಶ, ಬನ್ನಿ, ಪಾಲ್ಗೊಳ್ಳಿ, ಯಶಸ್ವಿಯಾಗಿ

ದಯವಿಟ್ಟು ಸಮಯಕ್ಕೆ ಬಂದು ಫೋಟೋ ಮತ್ತು ಜಾತಕದೊಂದಿಗೆ ನೊಂದಾಯಿಸಿಕೊಳ್ಳಿ, ನೊಂದಣಿಗೆ ಶುಲ್ಕವಿರುತ್ತದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

080-22443617, 9845644950, 9663869847,
9740514315, 9980078368, 9342942201

ಕಾರ್ಯಕ್ರಮಕ್ಕೆ ಬರುವವರು ಮಾಸ್ಕ್ ನ್ನು ಧರಿಸಿಬರತಕ್ಕದು

### ದತ್ತಸನ್ನಿಧಿಯಲ್ಲಿ ವಿಪ್ರ ಅರ್ಚಕರ ಮತ್ತು ಪುರೋಹಿತರ ರಾಜ್ಯ ಸಮಾವೇಶ

## ಗಾಣಿಗಾಪುರದಲ್ಲಿ ದತ್ತ ಮಾಲಾಮಂತ್ರ ಹೋಮ













## ಉದಾರ ದೇಣಿಗೆ



ಯು.ಎಸ್.ಎ. ಪ್ರಜೆಯಾದ ಶ್ರೀಯುತ ಬಾಪು ಶ್ರೀನಿಧಿಯವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ವಿದ್ಯಾನಿಧಿ ನಿಧಿಗೆ ಮತ್ತು ಅಶಕ್ತ ಮಹಿಳೆಯರಿಗೆ ನೀಡುತ್ತಿರುವ ಮಾಸಾಶನ ನಿಧಿಗೆ ಒಂದು ಲಕ್ಷ ರೂ.ಗಳ ದೇಣಿಗೆ ನೀಡಿರುತ್ತಾರೆ. ಆರ್ಥಿಕವಾಗಿ ಹಿದುಳಿದಿರುವ 10 ವಿಪ್ರ ವಿದ್ಯಾರ್ಥಿಗಳಿಗೆ ಮತ್ತು ಅಶಕ್ತ ಮಹಿಳೆಯರಿಗೆ ಈ ನಿಧಿಯನ್ನು ಬಳಸಬೇಕೆಂದು ಅಪೇಕ್ಷೆಯನ್ನು ವ್ಯಕ್ತಪಡಿಸಿರುತ್ತಾರೆ. ಶ್ರೀಯುತರಿಗೆ ಮಹಾಸಭೆಯು ಪರವಾಗಿ ತುಂಬು ಹೃದಯುದ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

PERIODICAL RATE

VIPRANUDI KANNADA MONTHLY.
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 30-01-2023 Date of Publishing 24-01-2023


# ಶುಭಾಶಯಗಳು

## ಡಾ|| ಉದಯ್ ಬಿ. ಗರುಡಾಚಾರ್

## ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



**Dr. Uday B. Garudachar**

**MLA, Chickpet Assembly Constituency**

/BGUdayBJP www.udaygarudachar.in


If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar